ಕೊರವಂಜಿ

Koravanji



ಮಾರ್ಚಿ

೧೯೫೭

★

ಸಂಪಾದಕರು :

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀಮತಿ ಸುನಂದಮ್ಮ
ಶ್ರೀ॥ ಕಸ್ತೂರಿ
ಶ್ರೀ॥ "ಕೇಫ"
ಶ್ರೀ॥ ರಾಮಿ
ಶ್ರೀ॥ ದಾಶರಥಿ ದೀಕ್ಷಿತ್
ಶ್ರೀ॥ ಅ. ರಾ. ಸೇ.
ಶ್ರೀ॥ ನಾ. ಕ.
ಶ್ರೀ॥ ದಿಬ್ಬಯ್ಯ
ಶ್ರೀ॥ ಯೋ. ರಾಮಸ್ವಾಮಿ
ಶ್ರೀ॥ ಪೆದ್ದಣ್ಣ

ಇತ್ಯಾದಿ, ಇತ್ಯಾದಿ.


ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ
ಕವುನಾಣ್ಯ

ಮಾರ್ಚಿ ತಿಂಗಳಿನಲ್ಲಿ

ಮೈಸೂರು ಸಂಸ್ಥಾನದ ಒಂಭತ್ತು ಪ್ರಮುಖ

ಕೇಂದ್ರಗಳಲ್ಲಿ ಬಿಡುಗಡೆಯಾಗಲಿದೆ.





ಎಲ್ಲಾ ಬಗೆಯ ಮರಕೆಲಸಕ್ಕೆ - ಒಳಭಾಗಕ್ಕೆ ಯಾ ಹೊರಭಾಗಕ್ಕೆ, ಬಳಿಯುವದಕ್ಕೆ
ಶಾಲಿಮಾರ್
ವುಡಕೋಟ
ರೆಡಿಮಿಕ್ಸ್ಡ್ ಪೆಯಿಂಟ್
ಒಳ್ಳೇ ಹೊಳೆಪಿರುವ, ಬಹಳ ಬಾಳಿಕೆಯುಳ್ಳ ರೆಡಿಮಿಕ್ಸ್ಡ್ ಬಣ್ಣ
ಶಾಲಿಮಾರ್
ಲಸ್ಟ್ರಾಲ
ಅಲ್ಯೂಮಿನಿಯಂ ಪೆಯಿಂಟ್
ವಿಸ್ತಾರ ಮೇಲ್ಮೈ ಪ್ರಸರಣ ಶಕ್ತಿಯುಳ್ಳದ್ದು
ಶಾಲಿಮಾರ್
ಮ್ಯಾಟಕೋಟ
ಫ್ಲ್ಯಾಟ್ ವಾಲ್ ಪೆಯಿಂಟ್
ಒಳಭಾಗದ ಗಾರೆ, ಕಾಂಕ್ರೀಟು, ಮತ್ತು ಮರಕ್ಕೆ ಹಿಡಿಯುವುದು. ಬಾಳಿಕೆವುಳ್ಳದ್ದು.
ಅತ್ಯುತ್ತಮವಾದ ಸಕಲಕಾರ್ಯಗಳಿಗೂ ಉಪಯೋಗಿಸಬಹುದಾದ ಎನಾಮೆಲ್
ಅನೇಕ ತರದ ಕೈಗಾರಿಕೆ ಮತ್ತು ಮನೆಕೆಲಸಗಳಿಗೆ ಉಪಯೋಗಕ್ಕೆ ಬೀಳುವುದಲ್ಲದೆ ಯಾವುದರಮೇಲೂ ಬಳಿಯಬಹುದು. ಬ್ರಷ್ಷಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು ಅಥವಾ ಬಣ್ಣದಲ್ಲಿ ಅದ್ದಲೂಬಹುದು; ಆಗಿಂದಾಗ್ಗೆ ತೊಳೆದರೂ ಬಣ್ಣ ನಿಲ್ಲುವುದು
ಶಾಲಿಮಾರ್ ಸೂಪರ್‌ಲ್ಯಾಕ್
ಶಾಲಿಮಾರ್ ಸೂಪರ್‌ಲ್ಯಾಕ್
SHALIMAR PAINT
SHALIMAR PAINT, COLOUR & VARNISH CO., LTD., "Karim Manzil", Kumbargundi Road, Bangalore City-2. Telephone No. 3607
SPW 325

ಕೊರವಂಜಿ

ಸಂಪುಟ ೧೫ ಮಾರ್ಚಿ ೧೯೫೬ ಸಂಚಿಕೆ ೧೨

ಕುಹಕಿಡಿಗಳು

ಮಾರ್ಚಿ ತಿಂಗಳಲ್ಲಿ ಅಂಜುಬುರುಕ ನೊಲಗಳು ಕೂಡ ಹುಚ್ಚು ಹುಚ್ಚಾಗು ವಂತೆ.

—ಅದೇ ಕಾರಣದಿಂದಲೇ ಇರಬೇಕು ? ಬಡ್ಜೆಟ್ ಅಧಿವೇಶನಗಳು ಆ ತಿಂಗಳ ಸಮಯದಲ್ಲೇ ಮಂಡಿಸಲ್ಪಡುವುದು.

* * *

ಅಮೃತಸರದ ಅಧಿವೇಶನದ ಕಾಂಗ್ರೆಸ್ ಅಧ್ಯಕ್ಷರ ಭಾಷಣವನ್ನು ಶ್ರೀಯುತ ಢೇಭಾರ್ ಅವರು ಓದಿದರಂತೆ—

—ಬರೆದವರಾರೋ ? ಪ್ರಚುರವಾಗದಿದ್ದರೂ ತಿಳಿಯದೇ ಇಲ್ಲ !

* * *

ಸೊಂಟದ ಉಡಿಯಲ್ಲೇ ಹಣವನ್ನು ಶೇಖರಿಸಿಡುತ್ತಾರಂತೆ ಸಾಮಾನ್ಯ ಜನರು.

—ಅದಕ್ಕೇ ಇರಬೇಕು ದೇಶಮುಖರು ಕೈಹಾಕಿದಾಗ, ಸೊಂಟವೇ ಕಳಚಿ ಬಿದ್ದಂತಾಗುತ್ತದೆ, ಸುಮಾರು ಜನರಿಗೆ.

* * *

ಸೌಹಾರ್ದ್ರ ವಾರದ ಸಲುವಾಗಿ ಅಂಚೆಸ್ಟಾಂಪುಗಳಗೊಂದಿಗೆ ಬಿಲ್ಲವನ್ನೂ ಬೆರೆಸಿದ್ದಾರಂತೆ,

—ಹೆಬ್ಬಿಗುಬ್ಬಾಲೆಯ ಅಂಚೆ ಆಫೀಸಿನಲ್ಲಿ ಸ್ಟಾಂಪು ನೆಕ್ಕುವುದಕ್ಕೇಂದೇ ಜನರು ಕ್ಯೂಗಟ್ಟಿ ನಿಂತಿದ್ದಾರಂತೆ.

*　　*　　*

ಬೊಚ್ಚುಬಾಯಿನ ಮುದುಕ ಈಗಿನ ಕಾಲದಲ್ಲಿ ಯುವಕನ ಸಾಹಸವನ್ನೆಲ್ಲಾ ಮಾಡಲು ಸಾಧ್ಯ—(ಮುದಿ ಸಚಿವನ ಉದ್ಗಾರ).

—ಕೋಡುಬಳೆ ತುರುಕಿ ನೋಡಿ ಪರೀಕ್ಷಿಸಬೇಕಲ್ಲವೇ?

*　　*　　*

ಶ್ರೀ ಕೃಷ್ಣ ಮೆನೋನ್‌ರವರ ಸಹೋದರಿಯ ಮನೆಯಲ್ಲಿ ಮಾನ್ಯ ಪ್ರಧಾನ ಸಚಿವರು ಉಪಹಾರಮಾಡಿದರಂತೆ—

—ಶ್ರೀ ಕೃಷ್ಣ ಅವಲಕ್ಕಿ ತಿಂದಾಗ ಕುಚೇಲನಿಗೆ ಏನು ಬೇಕಾದರೂ ಆಗಿದ್ದಂತಿರಲಿ, ಈಗ ಸಹೋದರಿ ಕೊಟ್ಟ ಅವಲಕ್ಕಿ ತಿಂದಾಗ ಶ್ರೀಕೃಷ್ಣನೇ ಉದ್ಧಾರವಾದುದು ಸಹಜವಲ್ಲವೇ, ಈ ತಲೆಕೆಳಕು ಕಾಲದಲ್ಲಿ.

*　　*　　*

ಶ್ರೀಕೃಷ್ಣ ಮೆನೋನ್‌ರವರು ಭಾರತದ ಕೇಂದ್ರ ಮಂತ್ರಿಗಳಾದ ತರುಣದಲ್ಲೀ ಮೊದಲಿನಂತೇ ಅಮೇರಿಕಾಕ್ಕೆ ತೆರಳಿದರಂತೆ —

—ಅಷ್ಟಕ್ಕೇನೇ ಮಂತ್ರಿಗಳಾಗಿದ್ದು!!

*　　*　　*

ತನ್ನ ಅಂತಸ್ತಿಗಿಂತ ಮೇಲಿನ ಹೆಣ್ಣುಮಗಳನ್ನು ಮದುವೆಯಾಗುವುದು ಹಿತವಲ್ಲಾ ಎಂದು ಹಿತೋಕ್ತಿಯಿದ್ದರೂ ಕೂಡ,

ವಿಧಾನ ಸೌಧದ ಕೆಳ ಅಂತಸ್ತಿನ ಐ. ಎ. ಎಸ್. ಅಧಿಕಾರಿಯು ನಾಲ್ಕನೆಯ ಅಂತಸ್ತಿನಲ್ಲಿರುವ ಸೌಭಾಗ್ಯವತೀ ಕಾರ್ಯದರ್ಶಿಯನ್ನು ಮದುವೆಮಾಡಿಕೊಂಡೇ ಬಿಡಲು ಮನಸ್ಸು ಮಾಡಿರುವನಂತೆ—ಆಕೆಯ ಅಪ್ಪಣೆಯ ಪ್ರಕಾರ—

*　　*　　*

"ನಗ್ನ ಕನ್ಯೆ", "ಭಗ್ನ ಸತ್ಯ", "ಭಂಡರ ಬಾಳು", "ಕೊಂಗರ ಕೇರಿ" ಇತ್ಯಾದಿ ನವ್ಯಕಾದಂಬರಿಗಳನ್ನು ಕಥಾರೀತಿ, ಇಂತಿಂತಹ ಶ್ರೀಯುತರು ಬರೆದಿದ್ದಾರೆ ಎಂದು ಪ್ರಕಾಶಕರು ಜಾಹೀರಾತು ಮಾಡಿದ್ದಾರೆ—

—ಯಾಕೆ? ಮೇಲ್ಹೊದಿಕೆಯ ಚಿತ್ರ ಸಾಕಷ್ಟು ಆಕರ್ಷಣೀಯವಾಗಿಲ್ಲವೇ? ಹೆಸರುಗಳೂ ಬೇಕೇ?

———o———

ಉರಿಗಾಳು

ಆಂಧ್ರ—ಮಹಾರಾಷ್ಟ್ರ ಒಂದಾದರೆ, ತ್ಯಾಗರಾಜ ತುಕಾರಾಮರ ಆತ್ಮಕ್ಕೆ ತೃಪ್ತಿ ಎಂದು ಶ್ರೀ ಗೋಪಾಲ ರೆಡ್ಡಿಯವರು ಹೇಳಿದರು....ಆಂಧ್ರ-ಕರ್ನಾಟಕ ಒಂದಾಗುವುದಾದರೆ, ಪುರಂದರ ದಾಸ!

* * *

ಶಾಲಾ ಮೈದಾನದಲ್ಲಿ ಬೆಳೆದ ಕಡಲೆಕಾಯನ್ನು ಮಾರಿ ಹೆಡ್ಮೇಷ್ಟರೊಬ್ಬರು ೫೭ ರೂ. ನಿಧಿ ಕೂಡಿಸಿದರಂತೆ ...ಶಾಲಾ ಹುಡುಗರ ಕಿಸೆ ಜಫ್ತಿಯಿಂದ ಶೇಖರಿಸಿದ ಕಡಲೆಕಾಯಿ ಮಾರಿ ಮತ್ತೊಬ್ಬರು ೫೮ ರೂ. ಸಂಪಾದಿಸಿದರಂತೆ.

* * *

ಮೈಸೂರೆಂದರೆ, ಮಹೀಶೂರ ಪುರವೋ, ಮಹಿಷಾಸುರಪುರವೋ, ಎಂಬ ವಾದವೆದ್ದಿದೆ....ಅದರ ಮೈ ದೊಡ್ಡದಾಯಿತಲ್ಲಾ, ಎಂಬುದೇ ನಮಗೆ ಸಮಾಧಾನ.

* * *

ತಿರು-ಕೊಚ್ಚಿ ಮುಖ್ಯ ಮಂತ್ರಿ, ಬೆಂಗಳೂರು ಒಕ್ಕಲಿಗರ ಸಂಘ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಗೊಳಿಸುತ್ತಾ, "ವಿದ್ಯಾರ್ಥಿಗಳಿಗೆ ಜಾತಿ ಇಲ್ಲ; ಅವರೆಲ್ಲರೂ ಒಂದೇ ಜಾತಿಗೆ ಸೇರಿದವರು" ಎಂದರು. ಆದರೆ, ಸ್ಕಾಲರ್‌ಷಿಪ್‌ಗೂ, ವಿಧವಿಧ ಜಾತಿಗೂ ನಿಕಟ ಸಂಬಂಧವಿದೆ ಎಂಬುದು ವಿದ್ಯಾರ್ಥಿಗಳಿಗೆ ಗೊತ್ತು.

* * *

ವಿಶಾಲ ಆಂಧ್ರವೂ-ಮೈಸೂರು ವಿಲೀನವಾದರೆ, ಆ ರಾಜ್ಯಕ್ಕೆ ವಿಶಾಲ ಮೈಸೂರು ಎಂಬ ಹೆಸರೇ ಇರಬೇಕೆಂಬ ಚಳುವಳಿ ಪ್ರಾರಂಭವಾಗಿದೆಯಂತೆ.

* * *

ಶೇಕಡ ಸುಮಾರು ನೂರು ಮಕ್ಕಳಿಗೂ ಇದ್ದೇ ಇರುವ ಮುಖ್ಯ ಬಾಲಾರಿಷ್ಟ ವೆಂದರೆ, ತಾಯಂದಿರು, ಎಂದೊಬ್ಬರು ಡಾಕ್ಟರು ಹೇಳಿದ್ದಾರೆ.

* * *

ಪ್ಯಾರಿಸ್ ಲೋಕ ಸಭೆಯಲ್ಲಿ ಸದಸ್ಯರು ಕುರ್ಚಿ ಮೇಜುಗಳನ್ನೆಸೆದಾಡಿದರು... ನಮ್ಮ ಲೋಕ ಸಭೆಯಲ್ಲಿ ಹೀಗೆ ಮಾಡಿದರೆ, ಒಬ್ಬರು ಸದಸ್ಯರಿಗೂ ಏಟು ತಗುಲುವುದಿಲ್ಲ.

* * *

ಕ್ರಾಂತಿ ಎಂಬುದು ಹೇಳಿಮಾಡಿಸುವಂತಹ ವಸ್ತು ಅಲ್ಲ (ಖ್ರುಶ್ಚೆವ್) ಅದು ಕೇವಲ "ಹೋಳಿ" ಮಾಡಿಸುವ ವಸ್ತು.

* * *

ಅಮೇರಿಕಾದಲ್ಲಿ ಹೃದ್ರೋಗ ಬಂದ ಪ್ರತಿ ಇಬ್ಬರಲ್ಲಿ, ಒಬ್ಬರು ಸಾಯುತ್ತಾರೆ (ಡಾ|| ವೈಟ್) ಮತ್ತೊಬ್ಬರು, ಆತ ಸತ್ತ ಸುದ್ದಿಯನ್ನು ಕೇಳಿ, ಹೆದರಿ ಸಾಯುತ್ತಾರೆ.

* * *

"ಶರಣಿ" ಎಂಬ ಪದವನ್ನು ಆಕಾಶವಾಣಿಯಲ್ಲೊಬ್ಬರು, "ತರುಣಿ" ಎಂದು ನಾಲ್ಕು ಬಾರಿ ಎಳೆದೆಳೆದು ಹಾಡಿದರು, ಎಂಬ ದೂರನ್ನು ಒಬ್ಬರು ತಂದಿದ್ದಾರೆ. ಅವನಿಗೆ ಈಗ ವಾಸಿ, ಎಂಬ ಸುದ್ದಿ ಸಂತೋಷದಾಯಕ.

* * *

ಚಿನ್ನದ ಗಣಿಗಳಲ್ಲಿ ಅಪಘಾತಗಳನ್ನು ಕಡಿಮೆ ಮಾಡಲು ಸರ್ಕಾರ ತೀವ್ರ ಕ್ರಮ ಕೈಗೊಳ್ಳುತ್ತಿದೆ (ಸುದ್ದಿ) ಗೊತ್ತು.... ರಾಷ್ಟ್ರೀಕರಣಮಾಡಿ, ಗಣಿಗಳನ್ನು ಮುಚ್ಚಿ ಬಿಡುವುದು, ಅಲ್ಲವೆ ?

* * *

"ಕನಕಪುರದಲ್ಲಿ ದೇವರ ನಾಮ ಸ್ಪರ್ಧೆ" (ಸುದ್ದಿ) .. ಹೀಗೆ ಸ್ಪರ್ಧೆ ನಡೆಯಿಸಿ, ನಮ್ಮೂರಲ್ಲಿ ದೇವರ ಕಣ್ಣು, ಮೂಗು, ಹಣೆ ಎಲ್ಲವೂ ನಾಮದಿಂದ ಮುಚ್ಚಿಹೋಗಿದೆ.

* * *

ಬೊಂಬಾಯಿ ನಗರದಲ್ಲಾದ "ಭಾಷಾವಾರ್" ಪ್ರಕರಣದಲ್ಲಿ, ಪ್ರಸಿದ್ಧ ಸಿನಿಮಾ ತಾರೆಯರಾದ ಪಮ್ಮಿ, ಓಂಪ್ರಕಾಶ್, ನಾಸಿರ್ ಖಾನ್, ಷಕೀಲ ಮುಂತಾದವರಿಗೆ ಕಲ್ಲಿನೇಟು ಬಿತ್ತಂತೆ. ಈ ಸುದ್ದಿಯನ್ನು ಕೇಳಿ ಬೊಂಬಾಯಿನ ಆ ನಾಗರಿಕರು ಕೆರಳಿ ಖಿನ್ನವಾಗಿದಾರಂತೆ.

* * *

ಮೂಗಿನಲ್ಲೇ ಒಬ್ಬಾತ ಹಾರ್ಮೋನಿಯಂ ಬಾರಿಸುತ್ತಾನಂತೆ.

—ಅಂದರೆ ಸ್ವ ರಕ್ಷಣೆಗೆ ಎರಡೂ ಕೈಗಳೂ ಸಿದ್ಧ !!

* * *

ಅಮೇರಿಕಾದಲ್ಲಿ ಕಾಫಿಯ ಕುಡಿತವನ್ನು ಪ್ರಚುರಪಡಿಸಲು ಅಷ್ಟಾಗಿ ಸಾಧ್ಯವಾಗಿಲ್ಲವಂತೆ—

—ಯಾಕೆ ? ಕಾಫಿ ಕುಡಿಯಬಾರದು ಎಂದು ಅಲ್ಲಿ ಕಾನೂನು ಮಾಡಿಸಲು ಬಲು ಕಷ್ಟವೇ ?

♥

ಕೊರವಾವಲೋಕನ

ಪೌರ್ಣಮಿ. ಸಂಜೆ ಏಳು ಗಂಟೆಗೆಲ್ಲಾ ಪೂರ್ಣ ಚಂದ್ರನ ಬೆಳಕು ಕ್ಲಬ್ಬಿನ ಹುಲ್ಲುಗಾವಲಿನ ಮೇಲೆ ರೇಶ್ಮೆ ಮಲ್ಲು ಹೊದಿಸಿದಂತೆ ಬಿದ್ದಿತ್ತು. ಒಂದು ಮೇಜಿನ ಹತ್ತಿರ ಕೊರವ ಒಬ್ಬನೇ ಕುಳಿತಿದ್ದ. ಇಬ್ಬರು ಸೇವಕರು ಮೇಜನ್ನು ಉಪಾಯ ವಾಗಿ ಸ್ವಚ್ಛಗೊಳಿಸುತ್ತಿದ್ದರು. ಇದರ ಮರ್ಮ ಏನಿರಬಹುದು ಎಂದು ನಾನು ಆ ಮೇಜಿನ ಕಡೆಗೆ ಹೋದೆ.

ಹೋಗಿ ನೋಡುತ್ತೇನೆ! ಆ ಮೇಜಿನ ಮೇಲೆ ಹಾಸಲ್ಪಟ್ಟಿದ್ದ ಗಾಜಿನ ಹಲಗೆ ಚುಪ್ಪಾ ಚೂರಾಗಿದೆ. ಆ ಚೂರುಗಳನ್ನೆಲ್ಲಾ ಸೇವಕರು ಹುಷಾರಾಗಿ ತೆಗೆಯು ತ್ತಿದ್ದಾರೆ.

ಕೊರವನ ಕೋಪ ಗಾಜಿನ ಮೇಲೆ ಸಂಧ್ಯಾಕಾಲ ಏಳು ಗಂಟೆಯ ಹೊತ್ತಿಗೇ ಈ ರೀತಿ ಪರ್ಯವಸಾನವಾಗುತ್ತೆ ಎಂದು ನಾನು ಕನಸಿನಲ್ಲೂ ಕಂಡಿರಲಿಲ್ಲ.

ಆ ವೇಳೆಗೆ ಸೇವಕರು ಮೇಜನ್ನು ಸರಿಮಾಡಿದ್ದರು. ನಾನೂ ಕುರ್ಚಿಯಲ್ಲಿ ಕುಳಿತು ಕೊರವನನ್ನು ಕೇಳಿದೆ, "ಏನಯ್ಯಾ! ಇಷ್ಟರಮಟ್ಟಿಗೆ ನೀನು ಹತೋಟಿ ತಪ್ಪುತ್ತೀ ಎಂಗು ಗೊತ್ತಿರಲಿಲ್ಲ" ಅಂದೆ.

ನಸುನಕ್ಕ ಕೊರವ. ನನಗೆ ಗಾಬರಿಯಾಯಿತು. ಕಣ್ಣುಗುಡ್ಡೆ ಸ್ವಲ್ಪ ಮುಂದಕ್ಕೆ ಬಂದಿದ್ದಿರಬೇಕು. ನಾನು ಕುರ್ಚಿಯಲ್ಲಿ ಒರಗಿಕೊಂಡಿದ್ದವನು ಸ್ವಲ್ಪ ಮುಂದಕ್ಕೆ ಬಂದು ನೆಟ್ಟಗೆ ಕುಳಿತುಕೊಂಡೆ.

ಕೊರವ ಆಗ ಹೇಳಿದ. "ಹೆದರಬೇಡ! ಮಗು!! ನನ್ನ ಹತೋಟಿ ನಾನು ಕಳೆದುಕೊಳ್ಳಲಿಲ್ಲ. ಅರವಾ ಮುದ್ದೆಂಗಾರಿ ಇದಾನಲ್ಲ! ಅವನ ಕೈವಾಡದಿಂದ ಈ ಗಾಜಿನ ಹಲಗೆ ಛಿದ್ರ ಛಿದ್ರವಾಯ್ತು. ವಿಷಯ "ಸಂಸ್ಕೃತಿ" ಅದಕ್ಕೇ ನಗು ಬಂತು" ಎಂದು.

ಕೊರವ ಯಾವಾಗಲೂ ಹೀಗೇನೇ! ಇಡಲಿ ಬಡಿಸಿಬಿಟ್ಟು, ಚೆಣ್ಣೆ ಚಟ್ಣಿ ತರುಕ್ಕೆ ಮೂಗು ನಿಮಿಷ ಕಾಯಿಸುತ್ತಾನೆ. ಅದು ಮೂರು ಗಂಟೆಗಳ ಹಾಗೆ ನಮಗೆ ಅನ್ನಿಸುತ್ತೆ — ಮಾತಿನಲ್ಲೂ ಹಾಗೇನೇ!!

ನನ್ನ ಕಾತುರತೆಯನ್ನು ಕಂಡು ಕೊರವ ಕನಿಕರದಿಂದ ವಿಶದೀಕರಿಸಿದ: ನೋಡು! ಮಗು!! ನಾನು ಬಂದಾಗ ಅರವಾಮುದ್ಯೆಂಗಾರ್ರಿ ಇಲ್ಲಿ ಕುಳಿತು ತಾನು ಸಂಸ್ಕೃತಿಯ ಮೇಲೆ ಭಾಷಣಮಾಡಿದ್ದು, ಅದಕ್ಕಾಗಿ ೨೫ ರೂಪಾಯಿ ಸಂಪಾದಿಸಿದ್ದೂ, ಭಾಷಣವಾದ ಮೇಲೆ ನೆರೆದಿದ್ದ ಜನಸ್ತೋಮ ಇವನನ್ನೇ ಸಂಸ್ಕೃತಿಯ ಅಧಿದೇವತೆಯೆಂದು ಭಾವಿಸಿಕೊಂಡರೆಂದೂ ಕೊಚ್ಚಿಕೊಳ್ಳುತ್ತಿದ್ದ ಆ ವೇಳೆಗೆ ನಮ್ಮ ಮಾಧು ಟೆನ್ನಿಸ್ ರಾಕೆಟ್ ಹಿಡಿದುಕೊಂಡು ಅಲ್ಲಿಗೆ ಬಂದ ಆಟ ಚೆನ್ನಾಗಿತ್ತಾ ಅಂತ ಮಾಧುವನ್ನು ನಾನು ಕೇಳಿದೆ. ಅವ ಹೇಳಿದ, ಇವತ್ತು ಟೆನ್ನಿಸ್ ಮ್ಯಾಚ್ ಇತ್ತು. ಅದನ್ನು ನೋಡುತ್ತಿದ್ದೆ ನಾನು ಆಡಲೇ ಇಲ್ಲ. ಆದರೆ ಆ ಮ್ಯಾಚು ಬಲು ಚೆನ್ನಾಗಿತ್ತು ಎಂದ.

ಆಗ ಅರವ ಮುದ್ಯೆಂಗಾರಿ ಪಲುಕಿದ, ಆಟ ಆಡೋದುಬಿಟ್ಟು, ನೋಡೋರನ್ನು ನೋಡಿದರೆ ನನಗೆ ಬಲು ರೇಗುತ್ತೆ ಎಂದು ಮಾಧು ಸ್ವಲ್ಪ ನೊಂದು ತಲೆ ತಗ್ಗಿಸಿದ. ನನಗೆ ರೇಗಿತು ನಾನಂದೆ, "ಅಲ್ಲಾ! ಅರವಾ ಮೊದ್ದು! ನಾಟಕ ನೋಡುಕ್ಕೆ ಹೋದವರೆಲ್ಲಾ ರಂಗಮಂಟಪ ಹತ್ತುತ್ತಾರೆಯೇ! ಪುಸ್ತಕ ಓದುವವರೆಲ್ಲಾ ಪುಸ್ತಕ ಬರೆಯಲು ಶುರುಮಾಡಿದರೆ ಗತಿ ಏನು? ಭಾಷಣ ಕೇಳುವವರೆಲ್ಲಾ ಭಾಷಣಮಾಡ ಹತ್ತಿದರೆ? ಸಂಗೀತ ಕಛೇರಿಯಲ್ಲಿ ಎಲ್ಲರೂ ಹಾಡಿದರೆ?? ಇಷ್ಟು ನಿನಗೆ ತಿಳಿಯ ಬೇಡವೇ? ಇಂತಹ ಜ್ಞಾನ ಅರಿತವ ನೀನು. ಸಂಸ್ಕೃತಿಯ ಮೇಲೆ ಏನು ಭಾಷಣ ಬಿಗಿದೆಯೋ, ಭಗವಂತನೇ ಬಲ್ಲ. ನಿನಗೆ ಸಂಭಾವನೆ ಬೇರೆ ಕೊಟ್ಟರು ಎಂದು ಹೇಳಿದೆ. ಅಂತಹ ಬಕ್ರ ಯಾರಾದರೂ ಇದ್ದಾರೆಯೇ ಈ ಲೋಕದಲ್ಲಿ" ಎಂದು. ಅವನ ಜತೆಯಲ್ಲಿ ಕುಳಿತಿದ್ದ ಸರಿಗೆ ರುಮಾಲಿನ ಮುದುಕನನ್ನು ನೋಡಿದೆ.

ಆಗ ಅರವಾ ಮುದ್ಯೆಂಗಾರಿ ಮೇಜನ್ನು ಕುಟ್ಟಿದ ಮಾತನಾಡಲಿಲ್ಲ ಮಾತನಾಡಲಾಗಲಿಲ್ಲ! ಗಾಜು ಒಡೆದುಹೋಯ್ತು ಸರಿಗೆ ರುಮಾಲಿನವರು ಅಂದಿನ ಭಾಷಣ ಸಭೆಯ ಅಧ್ಯಕ್ಷರೆಂದೂ, ಅವರೇ ಇವನಿಗೆ ೨೫ ಕೊಡಿಸಿದ್ದರೆಂದೂ ತಿಳಿಯ ಬಂತು ನಂತರ.

ಸಂಸ್ಕೃತಿಯ ಕುರುಹೆಲ್ಲಾ ಈ ಗಾಜಿನ ಮೇಲೆ ಎಂದು ಒಗ್ಗರಣೆ ಹಾಕಿದೆ ಅರವಾ ಮುದ್ಯೆಂಗಾರಿ ನರಭಕ್ಷಕನ ನೋಟದಿಂದ ನೋಡುತ್ತಾ ಸರಿಗೆ ರುಮಾಲಿನ ಅಧ್ಯಕ್ಷರೊಂದಿಗೆ ಮಾಯವಾದ

ನಾನೊಬ್ಬನೇ ಉಳಿದೆ. ಸೇವಕರಿಗೆ ಹೇಳಿಕಳಿಸಿ ಅತನ ಲೆಕ್ಕಕ್ಕೆ ಇದನ್ನು ಜಮಾಯಿಸಿ ಎಂದು ಅಣತಿಯಿತ್ತೆ.

ಇವರ ಯೋಚನೆಯನ್ನು ಮೆಲುಕು ಹಾಕುತ್ತಿದ್ದಾಗ ನೀನು ಬಂದೆ. ಚಂದ್ರನ ಬೆಳತಿಂಗಳಲ್ಲಿ ಚಂದ್ರಮುಖಿಯನ್ನು ಕಂಡಹಾಗಾಯ್ತು ನಿನ್ನ ನೋಡಿದಾಗ" ಎಂದ ಕೊರವ.

—ಚಂದ್ರನ ಬೆಳದಿಂಗಳು. ಕೊರವ ಕೆರಳಿರಬಹುದು. ಇನ್ನು ನಾನು ನನ್ನ ಸುರಕ್ಷತೆಗಾಗಿ ವಾಚನಾಲಯದ ಕೊಠಡಿಗೆ ಬೇಗ ಹೊರಟುಹೋದೆ.

* * *

ಮಂಗಳವಾರ ತಿರುಪತಿಯಿಂದ ಆಗತಾನೇ ಪಾಪ ಪರಿಹಾರಮಾಡಿಕೊಂಡು ಪಾಪಯ್ಯ, ಪಾಪ ಸಂಗ್ರಹಕ್ಕಾಗಿ ಕ್ಲಬ್ಬಿಗೆ ಬಂದಿದ್ದ. ಮುಕ್ಕಾಲು ಮಸಾಲೆ ದೋಸೆ ತಿಂದ ಮೇಲೆ ಉಪ್ಪು ಹೆಚ್ಚು ಪಲ್ಯ ಸಾಲದು ಅಂತ ಆ ಕಾಲು ದೋಸೆ ತಟ್ಟೆಯನ್ನೇ ಸೋಷಲಿಸ್ಟ್ ಸೋದರ ಸೇವಕನ ಮುಖದ ಮೇಲೆ ಎಸೆದು, ಚೆನ್ನಾಗಿ ಮಾಡಿ ಬೇರೆ ದೋಸೆ ತಂದರೆ ಆ ಬಿಲ್ಲಿಗೆ ಸಹಿ ಎಂದೂ ಗೂಂಡಾತನ ಮಾಡಿದ್ದ.

ಹುಲ್ಲುಗಾವಲಿನ ಮೇಲೆ ನಡೆವ ಈ ನಾಟಕವನ್ನು ಆ ತುದಿಯಿಂದ ನಾನೂ ಕೊರವ ನೋಡುತ್ತಿದ್ದೆವು. ಮುಕ್ಕಾಲು ದೋಸೆ ಮುಗಿಯುವ ತನಕ ಪಾಪಯ್ಯನ ಮುಖ, ಮಂಗನನ್ನು ನುಂಗಿದ ಹೆಬ್ಬಾವಿನಂತಿತ್ತು, ಓಟುಗಳಿಸಿ ಜಯಿಸಿದ ನಾಯಕ ನಂತಿತ್ತು, ಸುಳ್ಳು-ಸರ್ಕೀಟ್ ಬಿಲ್ಲನ್ನು ಅ|| ಜ|| ರಿಂದ ಘಳಿಸಿದ ಅಧಿಕಾರಿಯಂತಿತ್ತು. ರೋಗವನ್ನು ವಾಸಿಮಾಡಿದ ವೈದ್ಯನಂತಿತ್ತು. ಮೊಕದ್ದಮೆಯನ್ನು ಅನಿರೀಕ್ಷಿತವಾಗಿ ಗೆದ್ದ ಲಾಯರಿನಂತಿತ್ತು—ನಂತರ ತಿಳಿದೇ ಇದೆಯಲ್ಲ!!!

ಕೊರವನನ್ನು ನಾನು ನೋಡಿದೆ ದಯಾಪೂರಿತ ನಯನಗಳಿಂದ.

ಕೊರವ ನನ್ನನ್ನು ನೋಡಿದ ಸಮಾನ ಧರ್ಮದ ಕಣ್ಣುಗಳಿಂದ. ಆ ಮೇಲೆ ಉಪ್ಪೇರಿಯನ್ನು ಚಪ್ಪರಿಸುತ್ತಾ ಅಂದ, ಜನಪದ ರಗಳೆಯಲ್ಲಿ.

—ಗೂಂಡಾತನದಿಂದ ಸ್ವಾತಂತ್ರ್ಯ ದೊರಕೀತೋ—ದೊರಕೀತು!

—ಗೂಂಡಾತನದಿಂದ ಸ್ವರಾಜ್ಯ ದೊರಕೀತೋ—ದೊರಕೀತು!!

—ಗೂಂಡಾತನದಿಂದ ನಮ್ಮ ರಾಜ್ಯ ನಮಗಾಯಿತೋ—ಆಯಿತು!!

—ಗೂಂಡಾತನದಿಂದ ಮಸಾಲೆ ದೊರಕೀತೋ—ದೊರಕೀತು!!!

—ಪದ್ಮವಿಭೂಷಣ ಫಜಲಾಲೀಗೆ ಈ ಜನಪದಸಾಹಿತ್ಯ ಹೇಳೋಣ ಎನ್ನಿಸಿದೆ ನನಗೆ.

* * *

ನೋಡಿ! ನೋಡಿ! ಜಾದೂ ಮಾಡುತ್ತೇನೆ! ಈ ಗ್ಲಾಸಿನಲ್ಲಿ ಸೋಡಾ ಇದೆ. ಆ ಗ್ಲಾಸಿನಲ್ಲಿ ಸೋಡಾ ಇದೆ ಎರಡೂ ಕೂಡಿಸಿ ನೀರಾ ಮಾಡುತ್ತೇನೆ. ಅದನ್ನು ಕುಡಿಯಿರಿ, ದೇಹಕ್ಕೆ ತಂಪು, ಮನಸ್ಸಿಗೆ ಜೋಂಪು, ನೋಟಕ್ಕೆ ಇಂಪು" ಎಂದು ಕೂಗಿದ ಕೊರವ, ಬುಧವಾರ ಸಂಜೆ ಎಂಟರ ವೇಳೆಗೆ.

"ಎಲಾ! ಇವನ!! ಮಾಯಾ ಮಂತ್ರ ಮನೇಲಿ ಮಾಡೋದು ಬಿಟ್ಟು ಇಲ್ಲಿ ನಮ್ಮೆದುರಿಗೆ ಇವನಿಗೇನು ಬಂತು, ಇವನೇನು ಆರ್ಥಿಕ ಸಚಿವನೇ, ಇದೇನು ಪ್ರಜಾ ಸಭೆಯೇ! ಬಡ್ಜೆಟ್ ಅಧಿವೇಷನವೇ" ಎಂದು ಅಲ್ಲಿದ್ದ ನಾವೆಲ್ಲರೂ ಯೋಚಿಸುತ್ತಿದ್ದಾಗಲೇ ಕೊರವ ಮುಂದುವರಿಸಿದ.

ಇದೇ ರೀತಿ ನೋಡಿ ನನ್ನ ಸನ್ಮಿತ್ರ ಲಾಲಬಹದ್ದೂರ ರೈಲ್ವೆ ಸಚಿವ ಜಾದೂ ಮಾಡಿದ್ದಾನೆ. ಮೂರನೆಯ ತರಗತಿಯನ್ನು ಎರಡನೆಯದು ಎಂದು ನಾಮಕರಣ ಮಾಡಿದ್ದಾನೆ. ಎರಡನೆಯದನ್ನು ಒಂದು ಎಂದಿದ್ದಾನೆ ಅಂದ ಮೇಲೆ ವರ್ಗಾತೀತ ಸಮಾಜ ರೈಲಿನಲ್ಲಿ ಸಾಧನೆಯಾದಂತೇ ಅಲ್ಲವೇ! ಈ ಜಾದೂವಿನ ಕಾರಣ ಮೂರನೇ ತರಗತಿಯ ತಿಗಣೆಗಳು ಎರಡನೆ ತರಗತಿಯ ತಿಗಣೆಗಳಾದುವು ಎರಡನೆ ತರಗತಿಯ ತಿಗಣೆಗಳು ಪ್ರಥಮ ತರಗತಿಯ ತಿಗಣೆಗಳಾದವು. ನೋಡಿದಿರಾ, ಸಮತಾ ಸಮಾಜ ರೈಲಿನಲ್ಲಿ! ಚಿಕ್ಕಹನುಮ ದೊಡ್ಡ ಹನುಮನಾದ. ಅದೇ ರೀತಿ ನನ್ನ ಜಾದೂ ಎಂದ

ಸತ್ಯದ ಜಾದೂವನ್ನು ಮಾಯೆ ಎಂದರು ಹಿರಿಯರು ಅಲ್ಲವೇ?

—o—



ಆ ಯೋಜ(ಚ)ನೆ!

ವರ್ಷಾಂತರಗಳನ್ನು ಅತ್ತೆಮಾವಂದಿರ ಕೈಕೆಳಗೆ ಕಳೆದಿದ್ದಳು ಆಕೆ. ಅತ್ತೆ ಹೋಗಿ ಆರು ವರ್ಷವಾಯ್ತು. ಮಾವ ಹೋಗಿ ಈಗ ಮೂರು ವರ್ಷವಾಯ್ತು. ಬಿಗಿಮುಷ್ಟಿಯ ಹಿಡಿತದಿಂದ ಬಿಡುಗಡೆಯಾಗಿ, ಅತಂತ್ರದಿಂದ ಸ್ವತಂತ್ರಕ್ಕೆ ಬಡ್ತಿ ದೊರಕಿದಂದಿನಿಂದ, ಆಕೆಗೆ ಮಾರ್ಪಾಡಿನ ಹಲವಾರು ಯೋಚನೆಗಳು, ಹಲವಾರು ಯೋಜನೆಗಳೂ ಸಹ!

ಮೊದಲನೆಯದು, ಮತ್ತು ಮುಖ್ಯವಾದದ್ದು, ಆ ಮನೆ. ಸ್ವತಂತ್ರವೇನೋ ಹೌದು, ಆದರೆ ಪುರಾತನ ಕಾಲದ್ದು. ಮಾವನವರ ಅಜ್ಜ ಕಟ್ಟಿಸಿದ್ದು. ವಿತರಣೆ ಯಿಲ್ಲ, ವ್ಯವಧಾನವಿಲ್ಲ, ವಿಚಕ್ಷಣೆ ಮೊದಲೇ ಇಲ್ಲ! ಹಲವಾರು ಕೊಠಡಿಗಳು— ಕೆಲವು ಅತಿ ದೊಡ್ಡವು, ಮತ್ತೆ ಕೆಲವು ಅತಿ ಚಿಕ್ಕವು; ಹಿಡಿತಕ್ಕೇ ಬರಲೊಲ್ಲವು! ಈ ಲೋಪವನ್ನು ಸರಿಪಡಿಸಬೇಕೆಂದು ಆಕೆ ನಿರ್ಧರಿಸಿದಳು.

ಆತ ಪಾಪ, ಎಂದಿನಿಂದ ಮತ್ತೊಬ್ಬರ ನೆರಳಲ್ಲೇ ನಡೆದು ಬಂದ ಪ್ರಾಣಿ— ಇದುವರೆಗೂ ಅಪ್ಪ, ಅಮ್ಮ, ಈಗ ಈಕೆ,— ಯೋಜನೆಗೆ ತಥಾಸ್ತು ಎಂದು ತಲೆ ದೂಗಿದ. ಆಕೆ ಒಬ್ಬನೇ ಕಂಟ್ರಾಕ್ಟರನ್ನು ನಂಬದೆ, ಮೂವರು ಸಮರ್ಥರಾದ ಕಂಟ್ರಾಕ್ಟರುಗಳಿಗೆ ಈ ಕಾರ್ಯವನ್ನು ಒಪ್ಪಿಸಿದಳು. ಆ ಮೂರು ಮಿದುಳುಗಳೂ ಕೆಲಕಾಲ ವಾಯಿದೆ ಕೇಳಿದುವು.

ಅಷ್ಟರೊಳಗೇ ಆಕೆಯ ಸಂಸಾರದಲ್ಲಿ—ಮಕ್ಕಳು, ಅಳಿಯಂದಿರು, ಸೊಸೆ ಯರು, ತಮ್ಮ ತಮ್ಮ ಸೂಚನೆಗಳನ್ನು ಕೊಡಲಾರಂಭಿಸಿದರು. ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳು ಸಹ ಹೊರಟವು. ಆದರೆ ಆಕೆ—ಮನೆಯೊಡತಿ—ಕಂಟ್ರಾ ಕ್ಟರುಗಳ ವರದಿ ಬರುವ ತನಕ ಸುಮ್ಮನಿರೆಂದು ಸಮಾಧಾನಪಡಿಸಿದಳು.

ವಾಯಿದೆಯ ನಂತರ ಕಂಟ್ರಾಕ್ಟರುಗಳ ಘನವಾದ ನಕ್ಷೆ ಆಕೆಗೊಪ್ಪಿಸಲ್ಪಟ್ಟಿತು. ಅವರು ಆ ದೇಗುಲದ ಮನೆಯನ್ನು ಹದಿನಾರು ಭಾಗವಾಗಿ ಹಂಚಿ ಪ್ಲಾನು ಬರೆ ದಿದ್ದರು. ಇದು ಅತ್ಯುತ್ತಮವಾದ ನಕ್ಷೆ ನಾವು ತಯಾರಿಸಿರುವುದು, ಎಂದರು. ಆಕೆ ಆದರದಿಂದ, ಸಂತೋಷದಿಂದ, ಸ್ವೀಕರಿಸಿದಳು. ಮತ್ತು ನಾಲ್ಕಾರು ಗೋಡೆ ಗಳನ್ನು ಕೆಡವಲು ಸಹ ಆಜ್ಞೆ ಮಾಡಿದಳು.

ಆದರೆ, ಆಕೆ ಊಹಿಸದಿದ್ದ ಅಡ್ಡಿ ಆತಂಕಗಳು ಅಗಾಧವಾಗಿ ಬಂದು ನಿಂತುವು! ಕಂಟ್ರಾಕ್ಟರುಗಳ ನಕ್ಷೆಯ ಪ್ರಕಾರ ಮನೆಯೊಳಗೆಲ್ಲ ಅತ್ಯುತ್ತಮವಾದ ಗಾಳಿ, ಬೆಳಕುಳ್ಳ ಕೊಠಡಿ - ಹಿರಿಯ ಮಗನದು - ವಿಶಾಲವಾದ ಡ್ರಾಯಿಂಗ್ ರೂಮಿನಲ್ಲಿ ನುಂಗಿಹೋಗಿತ್ತು. ಇದಕ್ಕೆ ಹಿರಿಮಗ ಒಪ್ಪಲಿಲ್ಲ. ಅದು ನನಗೇ ಇರಬೇಕೆಂದ. ಕಿರಿಮಗ—ಎಂದಿನಿಂದ ಅವನೇ ಅನುಭವಿಸುತ್ತಿದ್ದಾನೆ, ನನ್ನ ಕೋಣೆಯ ಪಕ್ಕದಲ್ಲೇ ಇದೆ, ನನ್ನ ಕೋಣೆಗೇ ಸೇರಿಸಬೇಕೆಂದ. ಹೋಗಲಿ, ಅದು ಹಾಗೇ ಇರಲಿ, ನನ್ನ ಉಪಯೋಗಕ್ಕೆ ಎಂದಳು ತಾಯಿ ಅದಕ್ಕೆ ಇಬ್ಬರೂ ಒಪ್ಪಲಿಲ್ಲ. ಹಿರಿಯವನು ಕಿರಿಯವನ ಕೈ ತಿರುಚಿದ, ಕಿರಿಯವನು ಹಿರಿಯವನ ಹಲ್ಲು ಮುರಿದ!

ಅಷ್ಟೇ ಅಲ್ಲ! ಮಗಳಿಗೆಂದು ನಿರ್ಧರಿಸಿದ ಕೋಣೆ ಮೂಲೆಯಾಯಿತೆಂದು ಅಳಿಯ ಮುನಿಸಿಕೊಂಡ! ಕಾಲೇಜು ಕುವರಿ ಕೊಠಡಿ ಕಿರಿದ ಯಿತೆಂದು ಕೋಪಿಸಿ ಕೂತಳು! ತನ್ನ ಕೋಣೆ ಹರಿದು ಹಂಚುತ್ತಾರೆಂದು ಹರಿತಾಳವಮಾಡಿದಳು ಹಿರಿಯ ಸೊಸೆ, ತನ್ನ ಕೋಣೆ ಕೋಚೆಯಾಯಿತೆಂದು ಕೋಪದಿಂದ ತೌರು ಸೇರಿದಳು ಕಿರಿಸೊಸೆ! ಅವಳಿ ಜವಳಿಯಂತೂ ಒಂದೇ ಕೊಠಡಿ ಸೇರಲು ನಿರಾಕರಿಸಿ, ನಿರಶನ ವ್ರತವನ್ನೇ ಕೈಗೊಂಡುವು! ಮನೆಯವರೆಲ್ಲ ಒಬ್ಬರಮೇಲೊಬ್ಬರು ಅನುಮಾನ, ದ್ವೇಷ, ಒಂದು ಮುಖ ಪೂರ್ವ, ಮತ್ತೊಂದು ಮುಖ ಪಶ್ಚಿಮ! ನಗು ನಗುತ್ತಿದ್ದ ಮನೆ ನರಕವಾಯ್ತು!

ಆಕೆ, ಮನೆ ಅಂದಗೊಳಿಸುವುದಕ್ಕೆ ಹೋಗಿ ಇಷ್ಟು ಅಭಾಸವಾಯಿತಲ್ಲಾ ಎಂದು ಕೊರಗಿದಳು, ಚಿಂತಿಸಿದಳು. ಕಡೆಗೆ, ಇದಕ್ಕೊಂದೇ ಮಾರ್ಗ, ಸೋದರ ಮಾವ—ಎಲ್ಲರ ಮನೆ ಜಗಳವನ್ನೂ ಪರಿಹರಿಸಬಲ್ಲ ಪ್ರಸಿದ್ಧ—ಆತನ ಅಭಿಪ್ರಾಯ ದಂತೆ ನಡೆಯುವುದೆಂದು ನಿರ್ಧರಿಸಿದಳು.

ಆತ, ಎಲ್ಲವನ್ನೂ ಪರಿಶೀಲಿಸಿ, ಈ ರೀತಿ ತೀರ್ಪಿತ್ತ—ಇದು ಸಮತಾ ವಾದೀಯುಗ. ಆದ್ದರಿಂದ ಈ ಇಡೀ ಮನೆಯನ್ನು ಐದು ಸಮವಾದ 'ಹಾಲು' ಗಳಾಗಿ ಹಂಚಿಬಿಡೋಣ. ಆಗ ಯಾರ ಅಸಮಾಧಾನಕ್ಕೂ ಅವಕಾಶವಿರುವುದಿಲ್ಲ—ಎಂದು!

ಈಗ ಆಕೆ ಯೋಚಿಸುತ್ತಿದ್ದಾಳೆ—ಹಳೇ ಮನೆ, ಅಜ್ಜನ ಕಾಲದ್ದು— ಹಾಗೇ ಬಿಟ್ಟಿದ್ದರೇ ಚೆನ್ನು ಅಲ್ಲವೇ ಅಂತ!

—ಸುನಂದಮ್ಮ,
ಬೆಂಗಳೂರು.

ಉಪಾಯ ವೇದಾಂತ

ದೇವರೊಬ್ಬನೆ! ಹಲವರು ಇಲ್ಲ!
(ಹೆಚ್ಚಿಗೆ ಇದ್ದರೆ, ವೆಚ್ಚವು ಬಹಳ)
ಪ್ರತಿಮೆಯ ಪೂಜೆ? ...ಆಗದು! ಕೂಡದು!
(ನಾಣ್ಯದ ಮೇಲಿನ ಪ್ರತಿಮೆಯೆ ಪೂಜ್ಯ)
ನಮಿಸಲೆಬೇಕು, ಗುಡಿಯ ಲಿ, ಗುರುವಿಗೆ
(ಜನತೆಯ ಮೆಚ್ಚಿದೆ ಅದುವೆ ದಾರಿ)
ತಂದೆಗೆ ಗೌರವ, ತಾತಗೆ ಗೌರವ
ಸಲ್ಲಿಸಬೇಕು (ಸ್ವತ್ತನು ಹೊಡೆಯಲು)
ಹಿಂಸೆಯು ತಪ್ಪು, ಕೊಲೆಯೇ ಪಾತಕ
(ಬದುಕಿಪ ಗೋಜಿಗೆ ಹೋಗಲೆ ಬೇಡಿ)
ಪರಸತಿ ಪರಪತಿ ಗಮನವೆ ಕೂಡದು
(ಅದರಿಂ ತೊಂದರೆ ಬಲು ಬಲು ಜಾಸ್ತಿ)
ಕಳಬೇಡೆಂಬರು ಹಿರಿಯರು, ಹೌದು
(ಮೋಸವೆ ಅದಕಿಂ ಹೆಚ್ಚಿನ ಲಾಭ)
ಜಾತಿ ಮತ್ಸರವ ತ್ಯಜಿಸಲೆ ಬೇಕು
(ಮಾತಲಿ ಮಾತ್ರ! ಜೋಕೆ! ಜೋಕೆ!)
ಜೈ ಜೈ ಗಾಂಧಿ, ಕೂಗಿರಿ, ನುಗ್ಗಿರಿ
(ಎಲ್ಲಿಗೆ ಎಂಬುದು ನಿಮಗೇಕೆ?)
ಲೋಕಕೆ ಈಗಲೆ ಶಾಂತಿಯ ಬಯಸಿರಿ
(ನೆರೆಮನೆ ಹಗೆತನ ಕಡೆತನಕಿರಲಿ)
ಅಣ್ಣ ತಮ್ಮ ಅಕ್ಕ ತಂಗಿ
ಎನ್ನಲೆಬೇಕು, ಮಾನವರೆಲ್ಲರ
(ಅನ್ಯೋನ್ಯವನ್ನುತ, ಉರಿಯನು ಹಚ್ಚಿ,
ವೋಟನು ಪಡೆಯಲು ಅದುವೇ ಮಾರ್ಗ)

—ಕಸ್ತೂರಿ.

ಸವಾಲಿಗೆ ಉತ್ತರ

[ಸಿಂಗದೇವ — ನಾಗದೇವ]

ಕಳೆದ ತಿಂಗಳ ಕೊರವಂಜಿಯಲ್ಲಿ ಸಿಂಗದೇವ—ನಾಗದೇವ ಇಬ್ಬರೂ "ಅಸಮಾನ ಕವಿತಾ ಪ್ರತಿಭೆಯುಳ್ಳವರು, ಕ್ರಾಂತಿಕಾರರು, ಕನ್ನಡಸಾಹಿತ್ಯ ಸೀಮಾಪುರುಷರು" ಎಂದೆಲ್ಲಾ ಘೋಷಿಸಲ್ಪಟ್ಟು ವಿರೋಧ ಪಕ್ಷದವರು ಪ್ರತಿಭಟಿಸಿದರೆ ಅವರನ್ನು ಕಾಳಗಕ್ಕೆ ಕರೆದಹಾಗಿದೆ. ನಾವು ವಿರೋಧ ಪಕ್ಷದವರು ಎಂದು ಹೇಳುವುದಿಲ್ಲ—ಅಂದರೆ ಹಾಗೆ ಹೇಳಿಕೊಳ್ಳುವುದಕ್ಕೆ ನಮಗೆ ಧೈರ್ಯ ಸಾಲದೆ ಇಲ್ಲ—ನಾವು ತೀರ್ಥಹಳ್ಳಿ ತಾಲ್ಲೂಕು ನಿಶಾನಿ ಗುಡ್ಡದಲ್ಲಿ ಹುಲೀ ಉಗುರನ್ನು ಚೂಪು ಮಾಡುವ ಕಸುಬಿನವರು. ಆದರೂ ಸಾಹಿತ್ಯ ವಿಷಯದಲ್ಲಿ ವಿರೋಧಪಕ್ಷ ಹೂಡುವುದು ನಮಗೆ ತಕ್ಕುದಲ್ಲ—ಅಷ್ಟೆ!

ಸಿಂಗದೇವ ನಾಗದೇವ ಇಬ್ಬರೂ ನಿಜಕ್ಕೂ ಕವಿತಾ ಪ್ರತಿಭೆ ಉಳ್ಳವರಲ್ಲವೆಂದು ಹೇಳುತ್ತೇವೆ—ಕೇಳಿ. ಇದಕ್ಕೆ ನಮಗೆ ನಿಶಾನಿ ಗುಡ್ಡದಲ್ಲಿ ಸಿಕ್ಕಿರುವ ಶಾಸನವೇ ಸಾಕ್ಷಿ. ಕಲ್ಲಿನ ಶಾಸನ—ಶಾಸನದ ಮೇಲೆ ಈ ರೀತಿ ಬರೆದಿದೆ.

ಸಿ x x x ? x x x ವ

ಅಕ್ಕೈ ಯಮ್ಮ

ಸಿ x x x ? x x x ವ ಅಂದರೆ ಏನು ಅನ್ನುವುದು ನಮಗೆ ಖಚಿತವಾಗಿ ಗೊತ್ತಿಲ್ಲ. ಆದರೂ x x x ? x x x ಅಂದರೆ "ಂಗದೇವ ನಾಗದೇ" ಎಂತ ಅರ್ಥಮಾಡಿದ್ದೇವೆ. ಹೀಗೆ ಅರ್ಥಮಾಡಿದ್ದರಿಂದ ನಮಗೆ ಯಾವ ತೊಂದರೆಯೂ ಆಗಿಲ್ಲ. ಆದ್ದರಿಂದ "ಸಿ x x x ? x x x ವ" ಅಂದರೆ "ಸಿಂಗದೇವ ನಾಗದೇವ" ಎಂತಲೇ ಸಾಧಿಸುತ್ತೇವೆ. ನೀವು ಇದನ್ನು ಊರ ಕಾಟಮ್ಮನಾಣೆಗೂ ಒಪ್ಪಬೇಕು!

ಇನ್ನು ಅಕ್ಕೈಯಮ್ಮ ಅಂದರೇ ಏನು? ಇಲ್ಲಿ ಕೆಲವರು ನಮಗೆ ಸಿಕ್ಕಿರುವ ಶಾಶನದ ಕಲ್ಲು ಶಾಸನದ ಕಲ್ಲೇ ಅಲ್ಲವೆಂದೂ, ಅದು ಯಾವುದೋ ಅಬ್ಬೇಪಾರಿಯ ಮಾಸ್ತಿ ಕಲ್ಲೆಂದೂ ಹೇಳುತ್ತಾರೆ. ಇದನ್ನು ನಾವು ಒಪ್ಪಿಲ್ಲ. ನೀವೂ ಒಪ್ಪಬೇಡಿ.

"ಅಕ್ಕೈ" ಅಂದರೆ—ಕೈ. ಯಾವ ಕೈ? ಎಂತಹ ಕೈ? ಯಮ್ಮ ಹೇಗೆ ಬಂತು? ಯೀಣೆ—ಯಿಮೆ ಯಮ್ಮ—ಯಮ್ಮ ಅಂದರೆ ಯೀಣೆ ಯ ಕೈ ಆಯ್ತು. ಯೀಣೆಯ ಕೈ ಯಾವುದು? ಯಾರ ಕೈಲಿ ಯೀಣೆ ಇದೆ? [ಯೀಣೆ=ವೀಣೆ. ಯಿಣೆ ಬುಂಡೆ=ವೀಣೆ ಬುರುಡೆ. ಬುಂಡೆ ಭಕ್ತ ರತ್ನನ "ಗುಟ್ಟು" ಎಂಬ ಕವನದ ಆಧಾರ] ಯಿಣೆಯ ಕೈ ಅಂದರೆ ಸರಸ್ವತಿಯ ಕೈ ಎಂದರ್ಥ ಹಾಗಾದ ಮೇಲೆ

"ಅಕ್ಕೈಯಮ್ಮ" ಅಂದರೆ ಸಾಕ್ಷಾತ್ ಸರಸ್ವತಿ ಎಂದರ್ಥಮಾಡಿ. ಸಿಂಗ–ನಾಗರು ಸರಸ್ವತಿ ದೇವಿಯನ್ನು ಅಕ್ಕೈಯಮ್ಮ ಎಂದು ಕರೆದಿರಬೇಕಾದರೆ ಏನೋ ಕಾರಣ ಇರಬೇಕು. ಪ್ರಾಯಶಃ ಬಹ್ಮನು ಗುಣವರ್ಮನ ಮೇಲೆ (ಗುಬ್ಬಮ—ಗುಬ್ಬಿ) ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ ತಪ್ಪಿಗೆ ಈ ಸಿಂಗ—ನಾಗರು ಬಹ್ಮನ ರಾಣಿಯನ್ನು ದೂಷಿಸಿರಬಹುದೆ? ಏಕಾಗಿರಬಾರದು? ಪತಿಯ ತಪ್ಪಿಗೆ ಸತಿಯನ್ನು ದೂಷಿಸುವುದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯವಿದ್ದಿರಬಹುದು.

ಹೀಗಾಗಿ ಸಿಂಗದೇವ—ನಾಗದೇವ ಇಬ್ಬರೂ ಬರೀ ಕ್ರಾಂತಿಕಾರೀ ವಿನಹ ಕವಿತಾ ಪ್ರತಿಭೆಯುಳ್ಳವರಲ್ಲ. ಏಕೆಂದರೆ ವಿದ್ಯಾದೇವಿಯನ್ನು ದೂಷಿಸಿದವರು— (ಅಂದರೆ ಅಕ್ಕೈಯಮ್ಮ ಅಂತ ಹೆಸರಿಟ್ಟು ಕೊಂಡಿರುವವರು ವ್ಯಥೆಪಡಬೇಕಾಗಿಲ್ಲ. ಏಕೆಂದರೆ ಸಿಂಗ—ನಾಗರು ಯಾವ ಸ್ಥಿರಲಗ್ನದಲ್ಲಿ ಸರಸ್ವತಿಗೆ ಅಕ್ಕೈಯಮ್ಮನೆಂದು ನಾಮಕರಣಮಾಡಿದರೋ ಅದೇ ಘಳಿಗೆಯಿಂದ ಅಕ್ಕೈಯಮ್ಮ ಅಂದರೆ ಸರಸ್ವತಿಯ ಅವತಾರವೆಂದು ನಂಬಲಿ—ನಮ್ಮ ಅಭ್ಯಂತರವಿಲ್ಲ) ವಿದ್ಯಾದೇವಿಯನ್ನು ದೂಷಿಸಿ ದವರು ನಿಜವಾಗಿ ಕಾವ್ಯೋಪಾಸಕರಲ್ಲ. ಹಾಗಿದ್ದ ಮೇಲೆ ಅವರ ಚರಿತ್ರೆಕಾರರು ಯಾವ ಆಧಾರದ ಮೇಲೆ ಅವರನ್ನು ಕವಿತಾ ಪ್ರತಿಭೆ ಉಳ್ಳವರು ಎಂತ ಕರೆಯು ತ್ತಾರೆ? ನೀವೇ ಹೇಳಿ. ನಿಶಾನಿ ಗುಡ್ಡವು ಸೊರಬಕ್ಕೂ ಕಡೂರಿಗೂ ಮಧ್ಯದಲ್ಲಿದೆ. ಹಲಸಿನಹಣ್ಣು, ಕಾಫಿ ಇವುಗಳಿಂದ ಅಜೀರ್ಣಪೀಡಿತರಾದ ಸಿಂಗ ನಾಗರು ನಿಶಾನಿ ಗುಡ್ಡದಲ್ಲಿ ನೆಲಸಿದರು. ನೆಲಸಿ ಕಳ್ಳಭಟ್ಟಿ ತಯಾರಿಸಿದರು. ಇದಕ್ಕೆ ನಿಶಾನಿ ಗುಡ್ಡದ ದಟ್ಟವಾದ ಕಾಡುಗಳೇ ಕಾರಣ. ಅಲ್ಲಿ ಯಾವ ಪೋಲೀಸರೂ ಸುಳಿಯುವ ಭೀತಿಯಿಲ್ಲ. ಸುಳಿದರೂ ಈಚೆ ಬರುವ ಭೀತಿಯಿಲ್ಲ. ಈಗಲೂ ನಿಶಾನಿ ಗುಡ್ಡದ ತಪ್ಪಲಿನಲ್ಲಿ ಕಳ್ಳಭಟ್ಟಿ ತಯಾರಾಗುತ್ತಿರಬಹುದು. ಹಾಗಿದ್ದರೆ ಅದು ಪಾನ ನಿರೋಧ ಇಲಾಖೆಯ ಗುಟ್ಟು!

ಸಿಂಗ ನಾಗರು ಸತ್ತ ಬಗೆ ಹೇಗೆ? ಹಳೆಯ ಚರಿತ್ರೆಕಾರ ಶಾರ್ದೂಲನು ಒಂದೇ ವಾಕ್ಯದಲ್ಲಿ "ಸಿಂಗನಾಗ ನಾಮಾಮೃತಂ" ಎಂತ ಹೇಳಿದ್ದಾನೆ. ಇಬ್ಬರೂ ಒಬ್ಬರಿಗೊಬ್ಬರು ನಾಮ ಬಳಿಸಿಕೊಂಡು ಮೃತರಾದರು. ಹೇಗೆ? ಪ್ರಾಯಶಃ ಒಬ್ಬರಿಗೊಬ್ಬರು ನಾಮ ಬಳಿದಿರಲಾರರು. ಅಕ್ಕೈಯಮ್ಮ ಎಂಬ ಒಬ್ಬ ಹೆಂಗಸಿನ ವಿಷಯದಲ್ಲಿ ಮಾರಾಮಾರಿಯಾಗಿರಬಹುದು. ಆಕೆ ಇಬ್ಬರಿಗೂ ನಾಮ ಬಳಿದು ಅವರ ಮರಣಕ್ಕೆ ಕಾರಣಭೂತಳಾಗಿರಬೇಕು. ಯಾರಿಗೆ ಗೊತ್ತು?

ಅಂತೂ ನಾವು ಅ.ರಾ.ಸೆ.ಯವರ ಸವಾಲಿಗೆ ಉತ್ತರ ಕೊಟ್ಟಿದ್ದೇವೆ. ಅವರು ಇದನ್ನು ಒಪ್ಪಲಿ. ಹಾಗೆ ಒಪ್ಪದಿದ್ದಲ್ಲಿ ತಾವೇ ನಿಶಾನಿ ಗುಡ್ಡಕ್ಕೆ ಬರಲಿ. ಬೇಕಾದರೆ ದಾವಣಗೆರೆ ಚೌಕೀ ಪೇಟೆಯವರನ್ನು ಕರೆತರಲಿ. ಗಾಮಾ ಮಾರ್ಶಿಯೋನೋ ಗಳೂ ಬರಲಿ. ಎಲ್ಲರೂ ನಮ್ಮನ್ನು ಹುಡುಕಲಿ.

—"ಶೇಷ"

ಸರ್ವಜ್ಞ?

ಚಿಕ್ಕ ಕೂಸನು ಹೊತ್ತು ತರಬಾರದೀಸಭೆಗೆ
ಎಂದರಾ ಗಾನ ಸಭೆ ಕಾರ್ಯದರ್ಶಿ—ಮಕ್ಕಳಿಳೆ
ಅದುವೆ ಮೇಲೆನಿಸುವುದು, ಸರ್ವಜ್ಞ.

ಅಮೀಬ ಹಿಗ್ಗಿನಲಿ ಉಬ್ಬುತ್ತಲೆ, ಸೀಳಿತು, ಆ
ತುಂಡುಗಳೆರಡೂ ಮತ್ತೆ ಸೀಳಿದುವು ಹೀಗಾಗಿ ಏಕೋಹಂ
ಬಹುಸ್ಯಾಮಾಯಿತು, ಸರ್ವಜ್ಞ.

ಒಬ್ಬನೇ ಇದ್ದಾಗ ಸಾಧು, ಪಶು, ಸತ್ಪುರುಷ!
ಮಂದಿಯಾ ಮಧ್ಯದಲಿ ಸೇರ್ದಾಗ, ಆ ಪ್ರಾಣಿ
ಕಲ್ಲನೇ ಬೀರುವನು, ಸರ್ವಜ್ಞ.

ವರನನ್ನು ಕಂಡಾಗ, ವಧು, ಜಾಣೆ, ಹೇಳಿದಳು
ಇವ ಬೇಡ! ಇವನಂತೆ ಹೆಣ್ಣುಮಗು ಹುಟ್ಟಿದರೆ,
ಅದರ ಮದುವೆಗೇ ತ್ರಾಸ, ಸರ್ವಜ್ಞ.

ಸೊಳ್ಳೆಗಳ ನಾಶಕ್ಕೆ ಕೇಸಿ ರೆಡ್ಡೀಗಾರು
ಡೀಡೀಟಿ ಪುಡಿಮಾಡೆ, ಕೊಡಿಕೊಡಿ ಎನ್ನುತ್ತ, ಆ ಪ್ರಾಣಿ
ಹಿಡಿ ಹಿಡಿ ಮುಕ್ಕಿದುವು, ಸರ್ವಜ್ಞ.

—o—

ವೈದ್ಯರಲ್ಲಿ ವಿಷ ನಿಮಿಷಗಳು

ಆತ—ಡಾಕ್ಟ್ರೇ—ನೋಡಿ ಡಾಕ್ಟ್ರೇ—ಉಫ್! ನಂಗೆ ಈ ನಡುವೆ ಎಲ್ಲಾ—ಉಫ್! ಉಫ್! ಮೈಮೇಲೆಲ್ಲಾ ಚಿಟ್ಟೆಗಳು—ಉಫ್! ಉಫ್! ಅಗೋ ಹೊಟ್ಟೆ ಮೇಲೆ—ಉಫ್! ಮೈಮೇಲೆ ಚಿಟ್ಟೆಗಳು ಹರಿದ್ಹಾಗೆ ಆಗ್ತದೆ- ಉಫ್! ಉಫ್! ಉಫ್! ...."

ಡಾಕ್ಟ್ರು—ತಾಳಯ್ಯಾ—ಉಫ್! ಉಫ್! ನಿನ್ನ ಹುಳು ಚಿಟ್ಟೇನ ನನ್ನ ಮೇಲೆ ಊದಬೇಡ.

ನಾನೇನು ಹೇಳಲಿ?

ಅವತ್ತು ಪದ್ಮ ಕೆರೆ ಏರಿ ಕಡೆಗೆ ವಾಕ್ ಹೋಗುವ ಪ್ರೋಗ್ರಾಂ ಇಟ್ಟು ಕೊಂಡಹಾಗಿತ್ತು. ಆವಳ ಸ್ನೇಹಿತೆ ಹೋಗೋಣ ಎಂದಿದ್ದಳಂತೆ. ಐದೂವರೆಯ ಹೊತ್ತಿಗೆ ಪದ್ಮ ಹೊರಟು ಸಿದ್ಧಳಾಗಿ ನಿಂತಿದ್ದಳು. ಸ್ನೇಹಿತೆಯೂ ಬಂದಳು.

ಆದರೆ ಪದ್ಮ ಎಷ್ಟು ಉತ್ಸಾಹದಿಂದಿದ್ದಳೋ ಸ್ನೇಹಿತೆ ಯಾಕೋ ಅಷ್ಟೇ ನಿರುತ್ಸಾಹದಿಂದಿರುವಂತೆ ಕಂಡಿತು. ಮಾತ್ರವಲ್ಲದೆ ನನಗ್ಯಾಕೋ ಮನಸ್ಸಿಗೆ ಹರ್ಷ ವಿಲ್ಲವಮ್ಮ, ಎಲ್ಲಿಗೂ ಹೋಗೋದೇ ಬೇಡ ಅನ್ನಿಸಿದೆ; ಇವತ್ತಿನ ಪ್ರೋಗ್ರಾಂ ಕ್ಯಾನ್ಸಲ್ ಮಾಡಬಿಡೋಣ ಅಂತ ನಿನಗೆ ಹೇಳಿಹೋಗೋದಕ್ಕಷ್ಟೆ ಬಂದೆ—" ಎಂದು ಮುಂತಾಗಿ ಹೇಳಿದ್ದು ಕೇಳಿಸಿತು.

ಪದ್ಮಳಿಗೆ ನಿರಾಶೆಯಾಯಿತು ಎಂದು ಒಂದು ಬಗೆಯ ಅಪೂರ್ವ ಸಂತೋಷ ನನಗುಂಟಾಯಿತು. ಆದರೂ ಆಕೆ ಸುಮ್ಮನಿರಲಿಲ್ಲ. ಏನು ಸಮಾಚಾರ ಬೇಸರಕ್ಕೆ ಕಾರಣವೇನು ಎಂದು ಗೆಳತಿಯನ್ನು ಒಂದೇ ಸವನೆ ಪೀಡಿಸಿದಳು. ಆಕೆ ಯಾಕೋ ವಿಷಯ ತಿಳಿಸುವುದಕ್ಕೆ ನಾಚುತ್ತಿರುವಂತೆ ಕಂಡಿತು. ಬಹಳ ಹೊತ್ತು ಪೂಸಿಮಾಡಿದ ಮೇಲೆ ಗುಟ್ಟು ಹೊರಕ್ಕೆ ಬಂತು. ಮಧ್ಯಾಹ್ನ ಆಕೆ ತನ್ನ ಮೆಚ್ಚಿನ ಮೈಸೂರು ಸಿಲ್ಕು ಸೀರೆಯನ್ನು ಹೊರಗಡೆ ಬಿಸಿಲಿನಲ್ಲಿ ಹರವಿದ್ದಳಂತೆ ಯಾರೂ ಕಾಣದಿರುವಾಗ ಪಕ್ಕದ ಮನೆ ಎಮ್ಮೆಕರು ಬಂದು ಮುಕ್ಕಾಲು ಭಾಗ ಸೀರೆಯನ್ನು ಸುಖವಾಗಿ ಸ್ವಾಹಾಮಾಡಿ ಮೆಲುಕು ಹಾಕಿತಂತೆ ಸಾಯಂಕಾಲ ಉಡಬೇಕೆಂದು ಮಾಡಿದ ಸೀರೆಯ ಅವಸ್ಥೆ ಹೀಗಾದ್ದರಿಂದ ದುಃಖ, ವೈರಾಗ್ಯ ಇತ್ಯಾದಿ ಎಂದು ತಿಳಿಯಿತು. ಇದಿಷ್ಟು ವಿಷಯ ಯಾರಿಗೂ ಕೇಳಿಸಬಾರದೆಂದು ಬಹುಮೆಲ್ಲಗೆ ವರದಿಯಾದರೂ ನನಗೆ ತಕ್ಕಮಟ್ಟಿಗೆ ಕೇಳಿಸಿತು. ನಾನು ಕದ್ದು ಕೇಳಿದೆ ಎಂದರೆ ಸ್ತ್ರೀಜಾತಿ ಸುಮ್ಮನಿರುತ್ತದೆಯೆ ?

ಕೋಣನ ಕರಿ ಸೀರೆಯನ್ನು ಕಬಳಿಸಿದ ಸನ್ನಿವೇಶ ಇಬ್ಬರನ್ನೂ ನಗಿಸಿದ್ದಿರ ಬೇಕು. ಏಕೆಂದರೆ ಕಿಲಕಿಲ ನಕ್ಕಿದ್ದು ಕೇಳಿದೆ. ಆದರೆ ಮರುಕ್ಷಣದಲ್ಲಿ ಗೆಳತಿ ಮತ್ತೆ ಗಂಭೀರಳಾಗಿ ತನ್ನ ಕೊರಗನ್ನು ತೋಡಿಕೊಂಡಳು. ಪದ್ಮ ಸಾಧ್ಯವಾದಷ್ಟು ಸಹಾನುಭೂತಿ ತೋರಿಸಿದಳು. ಆದರೂ ಪರಿಸ್ಥಿತಿ ಸುಧಾರಿಸಲಿಲ್ಲ. "ಹಾಗಾದರೆ

ನನ್ನವಸ್ಥೆ ಹೇಳ್ತೀನಿ ಕೇಳು"—ಎಂದು ಅವಳಂದಿದ್ದು ಕೇಳಿಸಿತು. ಇದೇನಪ್ಪ ಇವಳವಸ್ಥೆ ಎಂದುಕೊಂಡೆ ಅವಳು ಟ್ರಂಕಿನ ತಳದಲ್ಲಿಟ್ಟಿದ್ದ ಮೂರು ರೇಷ್ಮೆಯ ಚೋಳಿ ಪೀಸುಗಳನ್ನು ಹುಳತಿಂದು ಛಿದ್ರ ಛಿದ್ರ ಮಾಡಿಬಿಟ್ಟಿತ್ತಂತೆ. ಇವತ್ತು ಮಧ್ಯಾಹ್ನ ಟ್ರಂಕಿನ ಒಟ್ಟೆಗಳನ್ನ ಮಗುಚಿ ಹಾಗ್ವಾಗ ಗೊತ್ತಾಯಿತಂತೆ. ಎಲ ಎಲಾ, ಸುಳ್ಳೇ ಹೊಡೆಯುತ್ತಿದಾಳಲ್ಲ—ಹಸೀ ಸುಳ್ಳು—ಎಂದು ಹಲ್ಲು ಕಡಿದೆ. ಯಾಕೋ ನಗು ಕೂಡ ಬಂತು. ಆದರೆ ಪದ್ಮ ತೀರ ಪ್ರಾಮಾಣಿಕವಾಗಿ ಹೇಳು ತ್ತಿದ್ದಂತೆ ಕೇಳಿಸಿತು. ಸಾಲದ್ದಕ್ಕೆ ಟ್ರಂಕಿನ ಬಾಗಿಲು ತೆಗೆದು ಬಟ್ಟೆ ತಂದು ತೋರಿಸಿಯೂ ತೋರಿಸಿದಳು. ಕೆಟ್ಟ ಹುಡುಗಿ ನನಗೆ ಹೇಳದೆ ಚೋಳಿ ಪೀಸುಗಳು ನಾಶವಾದ ಸಮಾಚಾರ ಗುಟ್ಟಾಗಿಟ್ಟಳೇ ಎಂದು ಸಾಕಷ್ಟು ರೇಗಿದೆ ನನ್ನೊಳಗೆ.

ಇಷ್ಟರಲ್ಲಿ ಗೆಳತಿ ಗೆಲವು ತಂದುಕೊಂಡಿದ್ದಳು. ಅವಳ ಬೇಸರವೆಲ್ಲ ಹಾರಿ ಹೋದಂತೆ ಕಂಡಿತು. ಆಕೆ ಒಂದೇ ಸವನೆ ಪದ್ಮಳು ಕಳೆದುಕೊಂಡಿದ್ದ ಚೋಳಿ ಪೀಸುಗಳ ಕುರಿತು ಸಹಾನುಭೂತಿ ತೋರಿಸುವ ಭರದಲ್ಲಿ ತನ್ನ ನಷ್ಟವನ್ನು ಮರೆತಂತೆ ಕಂಡಿತು. ನಾನಾ ಬಗೆಯ ಕ್ರಿಮಿ, ಕೀಟ, ದ್ವಿಪಾದಿ ಚತುಷ್ಪಾದಿ ಜಂತುಗಳಿಂದಾಗಿ ಮಹಿಳಾಮಣಿಗಳ ಬಟ್ಟೆ ಬರೆ ನಾಶವಾದ ಬೇರೆ ಬೇರೆ ಸಂದರ್ಭಗಳ ಕುರಿತು ಪುಟ್ಟ ಟಿಪ್ಪಣಿಗಳೂ ಆದವು!

ಸರಿ. ಆಮೇಲೆ?

ಆಮೇಲೇನು! ಇಬ್ಬರೂ ಒಂದೇ ಬಗೆಯಲ್ಲಿ ದುರವಸ್ಥೆಗೀಡಾಗಿದ್ದುದರಿಂದ ಪರಸ್ಪರ ಸಹಾನುಭೂತಿಯು ಹೊಳೆಯೇ ಹರಿಯಿತು. ಸಹಾನುಭೂತಿಯಿಂದ ಅಕ್ಕರೆಯೂ ತುಂಬಿ ಬಂತು. ಅಕ್ಕರೆ ಅವರಿಬ್ಬರನ್ನೂ ಹತ್ತಿರ ಹತ್ತಿರಕ್ಕೆ ತಂದಿತು. ಸರಿ, ಎಲ್ಲಿಲ್ಲದ ಉತ್ಸಾಹದಿಂದ ಅವರು ಕಾಫಿ ಕುಡಿದು ಕೆರೆ ಏರಿಕಡೆ ತಿರುಗಾಡಿ ಕೊಂಡು ಬರಲು ಹೊರಟು ಹೋದರು.

ನನಗೋ ಬಲು ರೇಗಿತು. ಚೋಳಿಪೀಸಿನ ವಿಚಾರ ನನಗೆ ಹೇಳಲೇ ಇಲ್ಲವಲ್ಲ; ಮನೆಗೆ ಬರಲಿ ಎಂದುಕೊಂಡೆ.

ಸಾಯಂಕಾಲ ಟೆನ್ನಿಸ್ಸಿನಿಂದ ನಾನು ಬರುವ ಹೊತ್ತಿಗೆ ಪದ್ಮ ಮನೆಗೆ ಬಂದಾ ಗಿತ್ತು. ಮೆಚ್ಚುಗೆಯ ಗೆಳತಿಯೊಡನೆ, ಸ್ವಚ್ಛವಾದ ಗಾಳಿಗೆ ಮೈಯೊಡ್ಡಿ, ಹರಟುತ್ತಾ ತಿರುಗಾಡಿಕೊಂಡು ಬಂದಿದ್ದರಿಂದ ಅವಳ ಮುಖದಲ್ಲಿಯೂ ನಡಿಗೆಯಲ್ಲಿಯೂ ನನಗೂ ಕೂಡ ಹಬ್ಬುವಷ್ಟು ಹರ್ಷ ಉಕ್ಕುತ್ತಿತ್ತು. ಆದರೆ ನಾನು ಬೇಕೆಂದೇ ಗಂಭೀರನಾದೆ. ನಾಗಪ್ಪನಂತೆ ಬುಸುಗುಟ್ಟಿದೆ. ಆದರೆ ಆಕೆಯದೋ ಹಾವಾಡಿಗನ ಛಾತಿ! ಪುಂಗಿ ಊದಿ ಹದಕ್ಕೆ ತಂದಳು. ಕೊನೆಗೆ ಚೋಳಿ ಪೀಸಿನ ಸಮಾಚಾರವನ್ನೂ ಹೇಳಿದಳು.


ಚೋಳಿ ಪೀಸುಗಳು ತನ್ನದಲ್ಲವೆಂದೂ, ಎಂದೋ ಒಮ್ಮೆ ಹುಳು ತಿಂದು ಹಾಳಾದ್ದನ್ನು ಅವಳ ಅಕ್ಕನಿಂದ ಪಡೆದಳೆಂದೂ, ಗೆಳತಿ ತನ್ನ ಸೀರೆ ಹೋದ ಕೊರಗಿನಿಂದ ವಾಕಿಗೆ ಸೊನ್ನೆ ಸುತ್ತುವ ಹಾಗೆ ಕಂಡುಬಂದಿದ್ದರಿಂದ ಅವಳ ಜುಗುಪ್ಸೆಯನ್ನು ಹೋಗಲಾಡಿಸಲು ತಾನು ಕಥೆ ಕಟ್ಟಬೇಕಾಯಿತೆಂದೂ ವಿವರಿಸಿದಳು.

ನಾನು ಮೂಕನಾಗಿ ಕೇಳುತ್ತ ನಿಂತೆ.

"ಸಿಕ್ಕಿದ್ದೆಲ್ಲ ಟ್ರಂಕಿಗೆ ತುಂಬಿಕೊಳ್ಳುತಿ ಎಂದು ಗದರಿಸುತ್ತೀರಲ್ಲ, ಇವತ್ತು ಆ ಹುಳುಹಿಡಿದ ಚೋಳಿ ಪೀಸುಗಳಿಲ್ಲದ್ದಿದಿದ್ದರೆ ಸೊಗಸಾಗಿ ವಾಕ್ ಹೋಗಿಬರುವುದು ತಪ್ಪಿಹೋಗುತ್ತಿತ್ತು ನೋಡಿ—"ಎಂದು ಆಕೆ ಮೂಗೇರಿಸಿದಳು.

ಅದಕ್ಕೆ ನಾನೇನು ಹೇಳಲಿ,

— ರಾಮಿ,



ದಾರೀಲಿ ನಡೆಯೋವಾಗ ಕೂಡ "ದಕ್ಷಿಣಪ್ರದೇಶ"—"ಮದ್ರಾಸ್ ಕೇರಳ"—
"ಕೇರಳ ಮೈಸೂರು"—"ಮೈಸೂರಾಂಧ್ರ"—"ಆಂಧ್ರ ಒರಿಸ್ಸಾ"—
ಹೀಗೇ ಒದರುತ್ತಾರೆ ಕಣೋ ನಮ್ಮ ನಾಯಕರು.

ಕ್ಷೀರುವಿನ ಆ ಸಂಜೆ

ಶಾನುಭೋಗನ ಕೋಪ ಶಾಯಿಕುಡಿಕೆ ಮೇಲೆ ಅಂತ ಕೇಳಿಲ್ಲವೇ? ತದ್ರೀತಿ/ ಆ ಸಂಜೆ ಕ್ಲಬ್ಬಿನಲ್ಲಿ ಕ್ಷೀರಪಾಲಯ್ಯ ಕಾಫಿ ಬಟ್ಟಲಿನ ಮೇಲೆ ರೇಗಿಬೀಳ್ತಾ ಇದ್ದ. ಆ ದಿನ ಕಚೇರಿಯಲ್ಲಿ ಬಂದು ಹೋದವರ ಗಲಾಟೆಯಲ್ಲಿ ಸುಸ್ತಾಗಿದ್ದನಂತೆ. ಕಾಫೀಗೆ ಹೇಳಿಕಳಿಸುವ ಹೊತ್ತಿಗೆ ಸರಿಯಾಗಿ ಅಧಿಕಾರಿಗಳು ಹೇಳಿಕಳಿಸಿ ಸಂಜೆ ಐದರ ತನಕ ಕಾಯಿಸಿದರಂತೆ. ಕಾರಣ ಕ್ಲಬ್ಬಿಗೆ ೫-೩೦ಕ್ಕೆ ಬಂದಿಳಿದಾಗ ಕ್ಷೀರೂಗೆ ಬಾಯಿ ಒಣಗಿ ಗಂಟಲು ಬತ್ತಿಒರುತ್ತಿತ್ತಂತೆ. ಗದ್ಗದ ದನಿಯಲ್ಲಿ ಕಾಫೀಗೆ ಆರ್ಡರು ಮಾಡಲು, ತಂದಿಟ್ಟ ಕಾಫಿಗೆ ಏನೋ ದರಿದ್ರ ಸೀಮೆ ಎಣ್ಣೆನ ವಾಸನೆಯಾಗಿತ್ತಂತೆ. ರೇಗಿಬೀಳ್ತಾ ಇದ್ದ ನಮ್ಮ ಕ್ಷೀರೂ.

ಆ ವೇಳೆಗೆ ಇಸ್ತ್ರಿ ಗುಮಾಲು ಸುತ್ತಲು ಹೋದರೆ ಕರಗರ ಶಬ್ದ ಮೆದುವಾಗಿ ಆಗುತ್ತೆ ನೋಡಿ, ಆ ಶಬ್ದ ವರಾಂಡದಲ್ಲಿ ಕೇಳಿಸಿತು. ತಿರುಗಿದರೆ ಕೊರವ. ಕ್ಷೀರೂ ಮುಖ ನೋಡಿದ. ನನ್ನ ಮುಖಾನೂ ನೋಡಿದ. ಏನು ಸಮಾಚಾರ ಅನ್ನುವ ರೀತಿಯಲ್ಲಿ ಬಲಹುಬ್ಬು ಎಬ್ಬಿಸಿದ. ನಾನು ವಿವರಿಸಿದೆ. ಸಾವಧಾನವಾಗಿ ಕೊರವ ಕ್ಷೀರಪಾಲಯ್ಯನಿಗೆ ಬಿನ್ನವಿಸಿದ, ಹಿಂದಿನ ಕಾಲದ ರಾಜರು ರಾಣೀವಾಸಕ್ಕೆ ಬಿನ್ನವಿಸುತ್ತಿದ್ದ ತೆರದಲ್ಲಿ.

“ಎಲಾ! ಹಾಲು ಕಾಯುವವನೇ! ಇಂತಹ ಹೊತ್ತಿನಲ್ಲಿ ಇಂತಹ ಕ್ಲಬ್ಬಿನಲ್ಲಿ ಕಾಫಿ ಬಯಸುವ ಭಕ್ತ ಯಾರು? ಅಂತಹ ಬಕ್ರನಿಗೆ ಯಾವ ಕಾಫಿ ಕೊಟ್ಟರೆ ತಾನೆ ಏನು ಸುಖ? ಕಾರಣ ಕಾಫಿ ಈ ರೀತಿ. ನಿನಗೆ ಒಳ್ಳೆಯ ಕಾಫಿಯ ಬಯಕೆ ಯಾದರೆ, ನಮ್ಮ ಘನ ಕೇಂದ್ರ ಸರ್ಕಾರದವರು ಟೌನ್‌ಹಾಲಿನ ಬಳಿ ಒಂದು ಈ ಕ್ಯಾಫೆ ಅಂತ ಶುರುಮಾಡಿದ್ದಾರೆ. ವೈ ಕ್ಯಾಫೆ, ಇಂಡಿಯಾ ಕ್ಯಾಫೆ, ಆನಂದ ಕ್ಯಾಫೆಗಳಿಗಿಂತ ಈಕ್ಯಾಫೆ ಬಲು ಸೊಗಸಿರಬೇಕು. ಅಲ್ಲಿಗೆ ಹೋಗಬಾರದೆ? ಅಂತ ಅಂದ.

ನಮ್ಮ ಅಧಿಕಾರಿಗಳು ನನ್ನನ್ನು ಕಾಫಿಯ ಹೊತ್ತಿಗೆ ಅದನ್ನು ತಪ್ಪಿಸಿ, ಕರೆಸಿ ಮಾತನಾಡಿದ್ದೂ ಈಕ್ಯಾಫೆಯ ವಿಚಾರವೇನೇ? ಅಲ್ಲಿಗೆ ಹೋಗಿದ್ದರಾದರೂ ಆಗಿತ್ತು ಎಂದು ಕ್ಷೀರಪಾಲಯ್ಯ ಮರುಗಿದ

ಹೆಸರು ಏನಾದರೇನು ಕೆಸರೆಲ್ಲಾ ಒಂದೇ ಅಲ್ಲವೇ?

*　　*　　*

ಬೆದರು ಬೊಂಬೆ

ತಾಯಮ್ಮ ತೌರುಮನೆಯಲ್ಲಿದ್ದಾಗಲೇ ಸದಾ ಬೆದರಿದ ಬೊಂಬೆಯಂತಿರುತ್ತಿದ್ದಳು—ಇನ್ನು ಗಂಡನ ಮನೆಗೆ ಬಂದ ಮೇಲೆ ಕೇಳಬೇಕೆ? ತಾಯಮ್ಮನಿಗೆ ತಾಳಿ ಕಟ್ಟಿದ ಗಂಡು ಸುಬ್ಬುಡು. ಅವನ ಹೆಸರೇನೋ ಅವನಿಗೇ ಗೊತ್ತಿಲ್ಲ. ಸುಬ್ಬುಡು ಅನ್ನಿಸಿಕೊಂಡು ಬೆಳೆದುಬಂದಿದ್ದ.

ತಾಯಮ್ಮನ ಮುಖವೇ ಬೆದರು ಬಣ್ಣದಿಂದ ಲೇಪಿಸಿತ್ತು. ಯಾರನ್ನು ಕಂಡರೂ ಸಂದೇಹ ನೋಟದಿಂದಲೇ ಅಂಜುತ್ತಾ ನೋಡುವಳು. ಸದಾ ಯಾರಾದರೂ ಕಳ್ಳರು ತನ್ನ ಮನೆಯನ್ನು ದೋಚಿ—ಕೊಳ್ಳೆಹೊಡೆದು—ಕತ್ತು ಹಿಸುಕಿ ಪ್ರಾಣತೆಗೆದು ಹೋಗಲು ಕಳ್ಳರು ಬರುವರೆಂದೇ ಅವಳ ಭಯ.

ಸುಬ್ಬುಡು ಶತವರಟು—ತಾಯಮ್ಮ ಅತಿ ಸೂಕ್ಷ್ಮ. ಸುಬ್ಬುಡು ಅತಿ ಎತ್ತರ—ತಾಯಮ್ಮ ಶತಕುಳ್ಳ. ಅತಿ ಧೈರ್ಯದ ಗೊಗ್ಗರ ಧ್ವನಿಯ ಕಪ್ಪು ಇಸಮು ಸುಬ್ಬುಡು. ತೆಳ್ಳನೆಯ ತಿಳಿ ಕಂಠದ ಎಳಸು ರೇಷ್ಮೆ ಗೂಡಿನ ಬಣ್ಣದ ಅತಿ ನಾಚಿಕೆಯ ಕುಬ್ಜೆ ತಾಯಮ್ಮ. ತಾಯಮ್ಮ ಮೇಡಮ್ಮ—ಸುಬ್ಬುಡುಗೆ ಇನ್ನೂ ಅವನ ಯೋಗ್ಯತೆಗೆ ತಕ್ಕ ಕೆಲಸವೇ ಸಿಕ್ಕಿಲ್ಲ.

ಹುಡುಗಿಯಾಗಿದ್ದಾಗ ತಾಯಮ್ಮ ಸೋದರಮಾವನಿಗೆ ಹೆದರಿ ಹೆದರಿ ಬೆಳೆದಳು—ಅವರಮ್ಮ ಗುಮ್ಮನ್ನ ತೋರಿಸಿ ಅನ್ನ ಹಾಕಿದಳು—ಅಪ್ಪ ಸಾಹೇಬರ ಮೇಲಿನ ಸಿಟ್ಟನ್ನ ಹೆಂಡ್ತಿ ಮೇಲೆ ಈ ಪಸುಳೆ ತಾಯಮ್ಮನ ಮೇಲೆ ಬಾಸುಂಡೆ ಮೂಡಿಸಿ ತೀರಿಸಿಕೊಂಡು ಕಾಲ ಕಳೆದ. ಇನ್ನು ಅಣ್ಣ ಬೈದು ಹೆದರಿಸಿ ಕೈಲಿದ್ದ ಬೆಲ್ಲ ಕಸಿಯುವ—ತಮ್ಮ ಅತ್ತು ಹೆದರಿಸಿ ಬಳಪ ಕೊಂಡೊಯ್ಯುವ—ಅಂತೂ ಇಂತೂ ತಾಯಮ್ಮನಿಗೆ ಬೆದರಿಕೆಯೇ ಮುಖ್ಯ ಆಹಾರವಾಗಿ ಬೆಳೆದುಬಂದಳು

ಸಾಲದ್ದಕ್ಕೆ ತಾಯಮ್ಮನಿಗೆ ಅಜ್ಜಿಯೊಬ್ಬಳಿದ್ದಳು. ಅವಳ ಹೆಸರೂ ತಾಯಮ್ಮನೇ. ಆ ಮುದುಕಿಗೆ ಕಳ್ಳರ ಕಥೆ ಬಿಟ್ಟು ಬೇರೆ ಯಾವ ಕಥೆಯೂ ಬಾರದು. ಅಗ್ಗಿಷ್ಟಿಕೆಯ ಮುಂದೆ ಚಳಿಯಲ್ಲಿ ಮುದುಡಿ ಕುಳಿತ ಪುಟ್ಟ ತಾಯಮ್ಮ ಬಿಟ್ಟ ಕಣ್ಣಿಂದ ನೆಟ್ಟ ದೃಷ್ಟಿಯಿಂದ ಬಿಟ್ಟ ಬಾಯಲ್ಲಿ ನೊಣ ಹೊಕ್ಕರೂ ಗೊತ್ತಾಗದೆ, ಗರಬಡಿದ ಗೂಬೆಮರಿಯಂತೆ ಕಥೆ ಕೇಳುವಳು. ಜಗ್ಗೋಜಿ—ಕನ್ನೋಜಿ—ತುಕ್ಕೋಜಿ

—ಬಿಕ್ಕೋಜಿ—ಈ ಚತುರ್ದಶ ಕನ್ನೇಶ್ವರ ರತ್ನರ ಸಾಹಸದ ಚೌರ್ಯದ ಚರಿತ್ರೆ ರಸವತ್ತಾಗಿ ಅಜ್ಜಿ ವರ್ಣಿಸಿದಾಗ ವರ್ಷಾನುವರ್ಷ ಕನಸಿನಲ್ಲಿಯೂ ಈ ಚೋರರು ಬಂದು ತಾಯಮ್ಮನನ್ನು ಬೆದರಿಸುತ್ತಿದ್ದರು.

ಸ್ಕೂಲು ಸೇರಿದಾಗ ಮೇಡಮ್ಮ—ಯಾರೋ ಮಾಡಿದ ಗಲಾಟೆಗೆ ಈಕೆಯ ತಪ್ಪುಮಾಡಿದ ಕಳೆಯ ಮುಖ ಕಂಡು ಬೆದರಿಸಿದ್ದರು. ಹೀಗಾಗಿ ತಾಯಮ್ಮ ಕಳ್ಳರ ನೆರಳಲ್ಲೇ ಬೆಳೆದಂತೆ ಬೆಳೆದು ನಿಂತಳು.

ಅಂದು ಶುಕ್ರವಾರ ಹಾಸಿದ ಚಾಪೆ ಮೇಲೆ ಅವಳನ್ನು ನೋಡಲು ಬಂದ ಸುಬ್ಬುಡು ಕುಳಿತಿದ್ದ. ಅವಳ ಜೀವಿತದಲ್ಲಿ ಮೊದಲ ಬಾರಿ ಅವಳೇ ಕಳ್ಳಿಯಂತೆ ವರ್ತಿಸಿದ್ದಳು. ಅದೇ ಆವಳು ಕಳ್ಳನೋಟದಿಂದ ಸುಬ್ಬುಡುವನ್ನು ನೋಡಿದ್ದು. ಸೋದರಮಾವ ಹಾರ್ಮೋನಿಯಂ ತಂದು ಮುಂದಿಟ್ಟು ತಿದಿಯೊತ್ತಿ ಎರಡೂ ಕೈಯ್ಯಲಿ ಹಾಡು ನುಡಿಸುವಂತೆ ಹೇಳಿದ್ದ. ನಡುಗುವ ಗಂಟಲು ಸೊಗಸಾದ ಪಲುಕನ್ನು ಪುಟಿಸಿತ್ತು. ಅಲೆ ಅಲೆಯಾಗಿ ಹೊರಟ ನಾದ ಸಂಪತ್ತು ಕೇಳಿದ ಸುಬ್ಬುಡು ಅಂತರಂಗದಲ್ಲೇ ಮೆಚ್ಚಿಕೊಂಡಿದ್ದ.

"ಮನುಜ ಶರೀರವಿದೇನು ಸುಖಾ...." ಎಂದು ಕೀಚಲು ಕೀರ್ತನೆ ಹೆದರಿ ತಾಯಮ್ಮನ ಕಂಠದಿಂದ ಹೊರಬಿದ್ದಾಗ ಸುಬ್ಬುಡುವನ್ನೇ ಕುರಿತು—ಇಂಥಾ ಭಾರಿ ಮನುಜ ಶರೀರ ಇದ್ದು ಏನು ಪ್ರಯೋಜನ ಎಂದು ಮುಗುಂ ಆಗಿ ಹೇಳಿದಂತಿತ್ತು. ಸುಬ್ಬುಡುವಿಗೆ ಎದುರಿಗಿದ್ದ ಕೋಡುಬಳೆ, ಸೀ ಉಪ್ಪಿಟ್ಟು, ಕಾಫಿಗಳ ಮೇಲೆ ಕಣ್ಣು. ತಾಯಮ್ಮ ಒಳಕ್ಕೆ ನಿಷ್ಕ್ರಮಿಸಿದಾಗ—ಸೋದರಮಾವ ಸುಬ್ಬುಡುವನ್ನು ಹೇಗೆ? ಎಂದು ಕೇಳಿದಾಗ 'ಸೊಗಸಾಗಿದೆ'—ಎಂದು ಎದುರುಗಿನ ತಿಂಡಿತಟ್ಟೆ ನೋಡಿ ಕೋಡುಬಳೆ ಮುರಿದು ಬಾಯಿಗಿಕ್ಕೇ ಹೇಳಿದ್ದ. ಸೋದರಮಾವ ಚಪ್ಪರ ಹಾಕಿಸಿ, ಹಸೆ ಇಡಿಸಿ ವಾಲಗದವರಿಂದ 'ಕನುಕೊಂಟಿ'ನಿ ಊದಿಸಿ ಮದುವೆ ಹೂಡಿಸಿಯೇ ಬಿಟ್ಟ.

ತಾಯಮ್ಮ ಬೆದರುತ್ತಲೇ ಹೊಸಲ ಮೇಲಿನ ಪಂಚಪಾತ್ರೆಯಲ್ಲಿನ ಅಕ್ಕಿಯನ್ನು ಬಲಗಾಲಿಂದ ಬೀಳಿಸಿ ಮನೆ ತುಂಬಿಸಿಕೊಂಡಳು. ಸುಬ್ಬುಡು ರಾಣೀವಾಸದಲ್ಲೇ ಸದಾ ಇರುತ್ತಿದ್ದ. ಅವನ ರಾಣಿ—ತಾಯಮ್ಮನಾಗಿರಲಿಲ್ಲ, ಆಕೆ ಬರೀ ದುಡಿದು ಹಾಕುವ ಹೆಂಡತಿ ಮಾತ್ರ ಆಗಿದ್ದಳು. ಅವನ ರಾಣಿ ಡೈಮಂಡ್ ರಾಣಿ. ರಾಣಿ ರಾಣಿಸಾಲು ಅವನ ಪ್ರಿಯವಾದ ಆಟ.

ಸುಬ್ಬುಡುವಿನ ರಾಣಿ ಪ್ರೇಮ ಅವನನ್ನು ಗುಲಾಮನನ್ನಾಗಿ ಮಾಡಿತ್ತು. ತಾಯಮ್ಮನ ರಾಜನಾಗಿರುವುದಕ್ಕೆ ತನಗೆ ತಕ್ಕ ಕೆಲಸಬೇಕು, ಆ ಕೆಲಸ ದೊರಕುವ ವರೆಗೆ ಮಾಡಲು ಕೆಲಸಬೇಕು—ಆ ಕೆಲಸ ಇಸ್ಪೀಟು ರಾಣಿಯ ಗುಲಾಮ ಕೆಲಸವೇ ಆಗಿದ್ದರೇನೀಗ? ಎಂದು ಅವನ ವಾದ. ಸಾವಿರ ಕಳೆದ. ಮನೆ ಮಠ ಹರಾಜು

ಮಾಡಿಕೊಂಡ. ದೊಡ್ಡ ಆಟವನ್ನೇ ಆಡಿ ಸಂತೋಷಪಟ್ಟೆ ಎಂದೆಂದುಕೊಂಡು ತೃಪ್ತಿಪಡೆಯುವಂತೆ ಇಂಲಿಲ್ಲ. ಇವನ ಜೊತೆಯ ದರಬೇಸಿಗಳ ಗುಂಪಿನಲ್ಲಿ— ಸೋತರೆ ಸಲಾಮು ಹೊಡೆಯುವ ಜುಜುಬಿ ಜೂಜಿನಲ್ಲೇ ಕಾಲ ಕಳೆದು ಸಲಾಮು ಹೊಡೆಯುವ ಈ ಗುಲಾಮ.

ತಾಯಮ್ಮನ ಸೋದರಮಾವನಿಗೆ ಇದೇ ಕೋಪ. "ಅವಳ ಗುಲಾಮನ ಹಾಗೆ ಅವಳು ಮೇಡಮ್ಮಾಗಿ ದುಡಿದು ಹಾಕ್ತಿರೋ ಅನ್ನ ತಿಂದು ಬೆಳೆಸಿದ ಬೃಹನ್ ಬಾಡಿ ಹೊಂದಿದ್ದರೂ ಅವನು ಯಾವ ಮಹಾ ಗಂಡಸು, ಹೆಣ್ಣು ಅನ್ನ ತಿಂದು ಬೆಳೆದವನು" ಎಂದು ಕಿಡಿ ಕಿಡಿಯಾಗಿ ಸಿಡುಗುಟ್ಟುವನು.

"ಬಾಗಿಲು" ಎಂದು ಕದ ತಟ್ಟಿದಾಗ ಹೆದರಿ ಅಡಕಲ ಕೋಣೆಗೆ ಹೋಗಿ "ಯಾರು?" ಎಂದಳು ತಾಯಮ್ಮ. 'ನಾನು' ಎಂದು ಗಡುಸಾದ ಧ್ವನಿ ಉತ್ತರಿಸಿತು. ಈ ರಾತ್ರಿ ಒಂಭತ್ತರ ವೇಳೆಗೆ ಯಾರು ಇರಬೇಕು ಎಂದು ಬೆದರಿದ ಬಾಲೆ ಮೆಲ್ಲಗೆ ಹೊರಗೆ ಬಂದು ಕಿಟಕಿಯಲ್ಲಿ ಇಣಿಕಿನೋಡಿದಳು—"ಯಾರು?" ಎಂದು ಮತ್ತೊಮ್ಮೆ ಕೇಳಿದಳು "ಕಳ್ಳರೆ?" ಎಂಬ ಸಂದೇಹದ ಧ್ವನಿಯಲ್ಲಿ. ಬಂದುದು ಬರಸಿಡಿಲಿನಂತಹ ಉತ್ತರ—

"ಅಯ್ಯಯ್ಯಾ — ನಾನ್ಕಣೆ ತಾಯಮ್ಮ ಕದ ತೆಗೀಬಾರ್ದಾ?"....ಸೋದರ ಮಾವನ ಧ್ವನಿ ಆಗ ಗುರ್ತಿಸಿ 'ಉಸ್ಸಪ್ಪ' ಕಳ್ಳರಲ್ಲ ಎಂಬ ಧೈರ್ಯದ ನಿಟ್ಟುಸಿರು ಸುಯ್ದು ಕದ ತೆಗೆದಳು.

"ಬಾ ಮಾವಾ ಯಾವಾಗ ಬಂದೆ?"

"ಅಲ್ಕಣೆ ತಾಯಿ, ಇನ್ನೂ ಭಯ ಬಿಡ್ಲಿಲ್ವ ನೀನು"

"ನಮ್ಮ ಹುಷಾರು ನಾವಿರಬೇಕು ಮಾವಾ—ಪೇಪರಲ್ಲಿ ಓದಲಿಲ್ಲೆ? ಕನ್ನೇಶ್ವರಿ ಭೀಮಾನ್ನೋನು ಹೊಸಪೇಟೇಲಿ ಹಾಗಾಹಗಲು ಮನೆಲಿದ್ದವರ ಕಾಲು ಮುರಿದು ಇದ್ದದ್ದನ್ನೆಲ್ಲಾ ದರೋಡೆ ಮಾಡ್ಕೊಂಡುಹೋದ ಸುದ್ದಿ."

"ಎಲ್ಲಿ ಸುಬ್ಬುಡು"

"ರಾಣಿವಾಸ ಇನ್ನೂ ಮುಗಿದಿಲ್ಲ."

"ಆ ಗುಲಾಮನಿಗೆ ಎಂದು ಬುದ್ಧಿ ಬರುತ್ತೋ—ಹ್ಯಾಗಿದ್ದಾನೆ ಈಗ.... ಕೆಲಸಗಿಲಸಾ"

"ಉಹುಂ—ಅದೇ ಜಬರದಸ್ತಿ—ಊಟ, ಇಸ್ಪೇಟು—ನಿದ್ರೆ....ನನ್ನ ಗ್ರಹ ಚಾರ....ಅದಿರ್ಲಿ ಏನು ಈಗ ಬಂದದ್ದು?"

"ನನ್ನ ಹೆಂಡ್ತಿನ್ನ ಎಲ್ಲಂಬಳಸೆಗೆ ಕಳಸಿದ್ದೆ—ತೊಂಡೆಭಾವಿಗೆ ರಾಂ ಚಿಕ್ಕಪ್ಪನ್ನ ಕಳಿಸಿದ್ದೆ—ಇಬ್ರನ್ನೂ ಕರ್‍ಕೊಂಡು ಹೋಗೋಕೆ ಮುಂಚೆ ನಿನ್ನೂ ನೋಡ್ಕೊಂಡು ಹೋಗೋಣಾಂತ ಬಂದೆ....ಇಕೊ ಕ್ವಾ...."

"ಇದೇನು ಭಾರಿ ಡಬ್ಬನೇ ತಂದೀದ್ದೀಯಾ"

"ಏನೊ ಇರ್‍ಲಿ ಕ್ವಾ...."

"ಊಟ"

"ಏಳ್ತೀನಿ....ನೀರುಮನೆ ಎಲ್ಲಿ!....ಸುಬ್ಬುಡು ಯಾವಾಗ ಬರೋದು?"

"ರಾತ್ರಿ ಹತ್ತೋ ಹನ್ನೊಂದೊ—ಕಾಲು ತೊಳ್ಕೊ ಮಾವಾ"

—ಸೋದರಮಾವ ಉಂಡು ಮಲಗಿದ. ತಾಯಮ್ಮ ಹಾಗೇ ತೂಕಡಿಸುತ್ತಾ ಗೋಡೆಗೆ ಕೂತಿದ್ದಳು ಸುಬ್ಬುಡುಗೆ ಕಾಯುತ್ತಾ. ಕಡೆಗೊಮ್ಮೆ ಬಂದ ಸುಬ್ಬುಡು—ಉಂಡು ಅವನೂ ಮಲಗಿದ. ತಾಯಮ್ಮನೂ ಮಲಗಿದಳು.

ಮಾಮೂಲಿನಂತೆ ತಾಯಮ್ಮನ ಕನಸಿನಲ್ಲಿ ಕಳ್ಳ ಕಾಣಿಸಿಕೊಂಡರು. ಸೋದರ ಮಾವ ಕೂಗಿದ್ದು—ಮತ್ತೆ ಸುಬ್ಬುಡು ಬಂದದ್ದು—ಆ ಸುಬ್ಬುಡು ಏನೇನೋ ಬಡ ಬಡಿಸಿದ್ದು ಈ ಎಲ್ಲಾ ಕಲಸುಮೇಲೋಗರವಾಗ ಮಲಗಿದಾಗ ಕನಸೆಲ್ಲಾ ದೊಂಗ ಸುಬ್ಬುಡುವಿನದೇ ಆಗಿತ್ತು.

—ಧಡೀರ್ ಎಂದು ಏನೋ ಬಿದ್ದಂತೆ ಸದ್ದಾಯಿತು. ಆ ಕಾರಿರುಳಲ್ಲಿ ತಾಯಮ್ಮ ಕಿಠ್ಠಾರ್ ಎಂದು ಕಿರುಚಿದಳು. "ಕಳ್ರೂ" ಎಂದು ಕತ್ತಿಂದ ಹೊರಟ ಸದ್ದನ್ನು ಪಿಸು ಶಬ್ದದಲ್ಲಿ ನೂಕಿ ತಳ್ಳಲು ಯತ್ನಿಸಿದಳು. ಧಬ್—ಧಬ—ಎಂದು ಸದ್ದಾಯಿತು—ಚಠೀರ್ ಪಠೀರ್ ಎಂದು ಕಪಾಳ ಸೇವೆ ನಡೆದದ್ದು ಕೇಳಿಸಿತು. ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡು ಶಾಲು ಮುಸುಗು ಹಾಕಿಕೊಂಡು ಕಸವಿಸಿ ಪಟ್ಟಳು. ಸುಬ್ಬುಡುವಿಗೆ ಕಳ್ಳರು ಚಚ್ಚುತ್ತಿರಬಹುದೆ?—ಸೋದರಮಾವ ಸಿಕ್ಕಿ ಬಿದ್ದಿರಬಹುದೆ? "ಭಗವಂತಾ ಕಡೆಗೂ ಕನ್ನೋಜಿಗಳು ನನ್ನ ಮನೆಗೆ ಬೀಳುವಂತೆ ಮಾಡಿದೆಯಾ" ಎಂದು ತತ್ತರಿಸಿ ಉಸುರುಕಟ್ಟಿ ಒದ್ದಾಡಿದಳಲ್ಲದೆ ಎದ್ದು ಬಂದು ವಿಚಾರವೇನು ಎಂದು ದೀಪ ಹಚ್ಚಲಿಲ್ಲ.

ಮೊದಲ ಜಾವದ ಕೋಳಿ ಕೂಗಿದಾಗ ಸೋದರ ಮಾವನೂ ಕೂಗಿದ. "ತಾಯಮ್ಮಾ ತಾಯಮ್ಮಾ ಏಳ್ತಾಯಿ..." —ಆ ಸದ್ದು ಸೋದರಮಾವನ ಗಂಟಲಿಂದಲೇ ಬಂದದ್ದೆಂದು ಖಚಿತವಾದ ಮೇಲೆ ನಖಶಿಖಾಂತ ಬೆವೆತ ತಾಯಮ್ಮ ಹೊರಕ್ಕೆ ಬಂದಳು.

"ಕಳ್ಳ ಸಿಕ್ಕಿಬಿದ್ದ ತಾಯಮ್ಮಾ"

"ಹೌದೆ? ಎಲ್ಲಿ? ಯಾರು?—ಪೋಲೀಸಿಗೆ ಕೊಟ್ರ್ಯಾ?"

"ಅಡಿಗೆ ಮನೇಲಿ ಕಟ್ಟಿಹಾಕಿದ್ದೀನಿ. ನೋಡು ಬಾ—ಚೆನ್ನಾಗಿ ಥಳಿಸಿದೆ ಬೇವರ್ಸಿಗೆ"

—ಎಂದು ಬಲವಂತದಿಂದ ಕರೆದೊಯ್ದ ತಾಯಮ್ಮನನ್ನು. ತಾಯಮ್ಮ ನೋಡಿದಳು. "ನೋಡಿ ದಣಿಯೆನೆ ಹರಿಯ" ಎಂಬಂತಾಯ್ತು. ಸಾಕ್ಷಾತ್ ಸುಬ್ಬುಡುವನ್ನು ಬೆಣ್ಣೆ ಕಡೆಯೋ ಕಂಭಕ್ಕೆ ಅದೇ ಹಗ್ಗದಿಂದ ಕಟ್ಟಿಹಾಕಿದ್ದ ಸೋದರಮಾವ. ಸುಬ್ಬುಡು ಎದುರಿಗೆ ಮಾವ ತಂದ ಕೋಡುಬಳೆ ಡಬ್ಬಿ ಇತ್ತು.

"ಅರೆ! ಮಾವಾ....ಇವರು."

"ಇವರೇ ನೆನ್ನೆ ರಾತ್ರಿ ಕೋಡುಬಳೆ ಕದಿಯೋಕೆ ಅಪರರಾತ್ರೀಲಿ ಗಲಾಟೆ ಮಾಡಿದ್ದು. ಕೆಲಸವಿಲ್ಲದೆ ಬರೀ ಆರೀನ್ ರಾಣಿ ಜೊತೆ ಕಾಲಾಕಳಿಯೋ ಈ ಗುಲಾಮನಿಗೆ ಬುದ್ಧಿ ಕಲಿಸೋಕೆ ಗೊತ್ತಿದ್ದೂ ತದುಕಿದೆ ತಾಯಮ್ಮಾ....ನಾನು ನೋಡಿ ಬಂದಿರೋ ಕೆಲಸಕ್ಕೆ ಸೇರ್ತೀನಿಂತ ಒಪ್ಕೊಂಡಿದ್ದಾನೆ ಸುಬ್ಬುಡು....ಇನ್ನು ನೀನು ತಂದು ಹಾಕಿದ ಹೆಣ್ಣು ಅನ್ನ ತಿಂದು ಜೀವಿಸಲಾರೆ ಎಂದು ಪಶ್ಚಾತ್ತಾಪ ಪಟ್ಟಿದ್ದಾನೆ...."

"ಅಯ್ಯೋ ಕಳ್ರೂಂತ್ಲೆ ಇದ್ದೆ... ಮಾವಾ ಅವರು ಕೆಲಸಕ್ಕೆ ಸೇರೋದು ಬೇಡ—ನಾನೇ ಮೇಡಮ್ಮಾಗಿರ್ತೀನಿ—ಅವರು ಕೆಲಸಕ್ಕೆ ಹೋದಾಗ ನಾನು ಮನೇಲೇ ಇದ್ದಾಗ ಕಳ್ರು ಬಂದ್ರೆ? .. ಅದಕ್ಕೆ ಭಯ."

"ಇಬ್ರೂ ಕೆಲಸಕ್ಕೆ ಹೋಗ್ರೀ...."

"ಹಾಂ ಅದು ಸರಿ...."

"ಈಗ ಅರ್ಥವಾಯ್ತೆ ಸುಬ್ಬುಡೂ ....ನಿನ್ನ ಕಟ್ಟಿಹಾಕಿದ್ದೂ........ಇನ್ನು ತಾಯಮ್ಮನ ಹೆದರಿಸಬೇಡ—ರಾಣಿವಾಸ ಬಿಟ್ಬಿಬಿಡು....ರತ್ನದಂತಹ ಹುಡುಗೀನ್ನ ಗೋಳಾಡಿಸಬೇಡವೋ...."

"ಬುದ್ಧಿಬಂತು ಮಾವಾ....ತಪ್ಪಾಯ್ತು ಕಣೆ— ಇನ್ನು ರಾಣಿ ಸಾಲೂಂದ್ರೆ ನೀನೇ ನನಗೆ ಬೈದುಬಿಡು ಹೆದರಬೇಡ—"

ಎಂದಾಗ ಪ್ರೇಮದಿಂದ ಸೋದರಮಾವನ್ನ ನೋಡಿ ಸಂಸಾರ ನೆಟ್ಟಗೆಮಾಡಿದ್ದಕ್ಕೆ ಮೆಚ್ಚಿಗೆ ತೋರಿಸಿದಳು.

ಸುಬ್ಬುಡು ಕಟ್ಬಿಚ್ಚಿ—ಮತ್ತೆ ಕೋಡುಬಳೆ ಜೊತೆ ಕಾಫೀನೂ ಕೊಟ್ಟು ಮುಂದೆ ಅನಂತಕಾಲ ಗಂಡಹೆಂಡಿರ್ ಸುಖವಾಗಿರ್ದರ್—

ಎಂಬಲ್ಲಿಗೆ ತಾಯಮ್ಮ ಪುರಾಣ ಪ್ರಥಮ ಪ್ರಕರಣ ಸಮಾಪ್ತಿ.

|| ಹರಿ ಓಂ ಸುಸ್ತು ||

— ದಾಶರಥಿ ದೀಕ್ಷಿತ್.

ಪ್ರಾಣೇಶ ಪ್ರಸಂಗ

"ಕುಂಭಕೋಣಂ"

ಪ್ರಾಣೇಶ ಮದರಾಸಿಗೆ ಹೋದವನು ಆಗತಾನೆ ರೈಲಿನಲ್ಲಿ ಬಂದ. ಮೂತಿ ಯಾಕೋ ಸಪ್ಪಗಾಗಿತ್ತು. ಹ್ಯಾಟ್ ಎತ್ತಿ ಗೂಟದ ಕಡೆಗೆ ಒಗೆದು ಧೊಪ್ಪೆಂದು ಆರಾಮಕುರ್ಚಿಯಲ್ಲಿ ಕುಸಿದುಕೊಂಡ.

"ಏನಯ್ಯ, ರೈಲಿನಲ್ಲಿ ರಷ್ ಜಾಸ್ತಿಯಾಗಿತ್ತೆ?"—ಎಂದು ಕೇಳಿದೆ.

"ಹೂಂ. ಕಣೋ, ಕುಂಭಕೋಣಂ!"—ಎಂದು ಉತ್ತರ ಬಂತು.

"ಕುಂಭಕೋಣದ ಜಾತ್ರೆಗೆ ಹೋದವರು ಬಹಳ ಮಂದಿ ಇದ್ದರೆಂದು ಕಾಣುತ್ತೆ"—ಎಂದೆ.

"ನಾನು ಕೂಡ ಕುಂಭಕೋಣಂ ಕಣೋ" ಎಂದ ಪ್ರಾಣೇಶ—ಒಂದು ತರದ ಒಣ ನಗು ನಗುತ್ತ.

"ಓಹೋ ನೀನೂ ಕುಂಭಕೋಣಕ್ಕೆ ಹೋಗಿದ್ದೆಯಾ! ಖುದ್ದು ಹೋಗಿ ಕುಂಭ ಕೋಣಂ ಕಲಿತು ಬಂದಿದ್ದು ಒಳ್ಳೆಯದಾಯಿತು. ಬಿಸಿನೆಸ್ಸಿನಲ್ಲಿ ಅದು ಬೇಕಾಗುತ್ತೆ."

"ಹಾಳಾದ್ದು ಬಹಳ ಚೆನ್ನಾಗಿ ತಿಳಕೊಂಡೆ ಕಣೋ ಕುಂಭಕೋಣಂ...."

"ವಾಚೇ? ಪರ್ಸೇ? ಪೆನ್ನೇ? ಯಾವುದು ಹೋಯಿತು?

"ಅವೆಲ್ಲಾ ಭದ್ರ ಕಣಯ್ಯ. ಸದ್ಯ 'ನೋವೋಕಿಲ್'ನವರು ಕುಂಭಕೋಣಂ ಮಾಡಿದರು."

"ಮದರಾಸು ಕುಂಭಕೋಣಕ್ಕೆ ಸಮಿಾಪ. ಅಂದಮೇಲೆ ಅವರಿಗೆ ಕುಂಭ ಕೋಣಂ ಚೆನ್ನಾಗಿ ತಿಳಿದಿದ್ದರೆ ಆಶ್ಚರ್ಯವಿಲ್ಲ. ಸಧ್ಯ ಯಾವ ಮಾದರಿ ಕುಂಭ ಕೋಣಂ ಹೇಳಪ್ಪ."

"ಮಾದರಿಯೇನು, ಒಂದು ಮಾದರಿ ಅಷ್ಟೆ! ಇನ್ನು 'ದಕ್ಷಿಣ ಪ್ರದೇಶ' ಅಂತ ಪರದಾಡ್ತಿದಾರಲ್ಲ, ಅದು ಕೂಡ ಒಂದು ಮಾದರಿ ಕುಂಭಕೋಣಂ."

"ನಿಜಾನ್ನು. ಸದ್ಯ 'ನೋವೋಕಿಲ್'ನವರು ಎಂಥಾ ಕುಂಭಕೋಣಂ ಮಾಡಿ ದರು ಅಂತ ಹೇಳು."

"ಅವರ ಕುಂಭಕೋಣಂ ಎಂದರೆ ನೀನು ಮೊದಲು warn ಮಾಡಿದೆಯಲ್ಲ ಅಂಥಾದ್ದೇ. ನಮ್ಮೂರಿನಲ್ಲಿ ಬ್ರಾಂಚು ತೆರೆಯುತ್ತಾರಂತೆ."

"ನೀನೇ ಯಾತಕ್ಕೆ ಬ್ರಾಂಚ್ ಮ್ಯಾನೇಜರಾಗಬಾರದು? ಹಾಗಂತ ಹೇಳ ಲಿಲ್ಲವೆ ಅವರು?"

ಶುದ್ಧ ಕೌರವ ಕಣೋ ಆ 'ನೋವೋಕಿಲ್' ಪ್ರೊಪ್ರೈಟರು. ಕೌರವನಿಗೆ 99 ಮಂದಿಯಾದರೆ ಈತನಿಗೆ 9 ಮಂದಿಯಾದರೂ ತಮ್ಮಂದಿರಿದ್ದಾರೆ. ಅವರಲ್ಲಿಬ್ಬರು ಬಂದು ಇಲ್ಲಿನ ಬ್ರಾಂಚು ನೋಡಿಕೊಳ್ಳುತ್ತಾರಂತೆ."

"ಮತ್ತೆ ನೀನು?"

"ನಾನು ಗುಮಾಸ್ತಗಿರಿ ಮಾಡಿಕೊಂಡಿದ್ದರೆ ಸರಿ. ಹಾಗಂತ ಹೇಳಲಿಲ್ಲ ಆತ. ಆದರೆ ಅವನು ಆಡಿದ್ದರ ಅರ್ಥ ಅಷ್ಟು."

"ಪಕ್ಕಾ ಕುಂಭಕೋಣಂ ಆಯ್ತಲ್ಲೋ"

"ಅದೇ ನಾನು ಹೇಳೋದು. ಈ ಕುಂಭಕೋಣಂನ ನಯವಾಗಿ ತಿಳಿಸೋ ದಕ್ಕಾಗಿ ನನ್ನ ಮದರಾಸಿಗೆ ಕರಿಸಿದ್ದು. ಫೈಲ್ ತೆಗೆದು ಅವನ ಮುಖಕ್ಕೆ ಎಸೆದು ಉದ್ದಕ್ಕೂ ಬಂದುಬಿಟ್ಟೆ. ಹಾಗೇ ಬರ್‍ತಾ ಕುಂಭಕೋಣದ ಜಾತ್ರೆಗೂ ಹೋದೆ. ಆದರೆ 'ಕುಂಭಕೋಣಂ' ನೋಡುವುದಕ್ಕೆ ಕುಂಭಕೋಣಕ್ಕೇ ಹೋಗಬೇಕಾಗಿಲ್ಲ. ದಕ್ಷಿಣ ಪ್ರದೇಶ ಅಂತ ಏನಾದರೂ ಆಗೋದಾಗಿದ್ದರೆ ಆಗ ಕುಂಭಕೋಣಂ ಎಲ್ಲಾ ರಿಗೂ ಗೊತ್ತಾಗುತ್ತೆ."

ಪ್ರಾಣೇಶ ನಿಜವಾಗಿಯೂ ರೇಗಿದ್ದ. ಆದ್ದರಿಂದ ನಿಧಾನವಾಗಿಯೇ ಹೇಳಿದೆ.

"ನೋಡಪ್ಪ, ನಾನು ಮೊದಲೇ ಹೇಳಿದ್ದೆ. ಇಂಥ ಕಂಪೆನಿಗಳಿಗೆ ಜೋತು ಬಿದ್ದು ಪ್ರಯೋಜನವಿಲ್ಲ. ತಮ್ಮ ಕೆಲಸ ಸಾಧಿಸಿಕೊಳ್ಳುವವರೆಗೆ ನೀನು ಹೇಳಿದ ಷರತ್ತಿಗೆಲ್ಲಾ ಒಪ್ಪಿಕೊಂಡರು. ನೀನೂ ಹಗಲಿರುಳೂ ಒದ್ದಾಡಿ 'ನೋವೋಕಿಲ್'ನ popularize ಮಾಡಿದೆ. ಈಗ ನೀನು ಬೇಕಾಗಿಲ್ಲ. ಬ್ರಾಂಚು ತೆರೆಯುತ್ತಾರೆ. ತಿಂಗಳಿಗೆ 500-600 ಕಮಿಷನ್ ಹೊಡೀತಿರೋದು ಅವರಿಗೆ ಸಹಿಸುತ್ತದೆಯೆ? ಅದಕ್ಕಿಂತ ಯಾವುದಾದರೂ ಫರಂಗಿ ಕಂಪೆನಿಗಳಾದರೂ ವಾಸಿ. ನೀವು ತಿನ್ನಿ, ನಾವೂ ತಿನ್ನೋಣ ಅಂತಾರೆ. ನಮ್ಮ 'ಪಂಚಶೀಲ'ದ ಸಂಸ್ಕೃತಿಯವರೋ ಎಲ್ಲಾ ನಾವೇ ತಿಂದರಾಗಬಹುದು ಎಂಬ ಮಹಾನುಭಾವರು. 'ನೋವೋಕಿಲ್' ಡಿಸ್ಟ್ರಿಬ್ಯೂಟರಾಗಿ ಅಮರಾವತೀನೆ ಇಳಿಸಿಬಿಡುತ್ತೇನೆ ಎಂದು ಕುಣಿದಾಡಿದೆ. ಅಮರಾವತಿ ಬಂತು—ನಿನಗಲ್ಲ, ಕಂಪೆನಿಯವನಿಗೆ! ನಿನ್ನ ಪಾಡು ನೀನು ನೋಡಿಕೊಂಡ ಹಾಯಿತು.

"ಡ್ಯಾಮಿಟ್ ಐ ಸೇ"—ಎಂದು ನೆಗೆದು ನಿಂತ ಪ್ರಾಣೇಶ. 'ನೋವೋಕಿಲ್' ನವನ ಮುಂಡಾಮೋಚಿತು. ಹೇಗೂ ಎರಡು ವರ್ಷಗಳಲ್ಲಿ ಐದು ಸಾವಿರ ಗಿಟ್ಟಿಸಿ ಕೊಂಡೆ. ಇನ್ನು ಬಿಸಿನೆಸ್ಸೂ ಬೇಡ. ನೌಕರಿಗೂ ಹೋಗೋದಿಲ್ಲ"

"ಅಂದರೆ ತುಂಡು ಕಾವ್ಯ ಬರೀತಾ ಕೂತುಬಿಡ್ತೀಯಾ? ಅಥವಾ ಸ್ಟ್ರೈಕು ಮಾಡಿಸೋದಕ್ಕೆ ಹೋಗ್ತೀಯಾ?"

"ಥೂ ಹಾಗೆಲ್ಲಾ ಅನ್ನಬೇಡಪ್ಪ. ಕಾಲೇಜು ಸೇರಿ ಆನರ್ಸ್ ಮುಗಿಸಿಬಿಡ ಬೇಕೆಂದು ರಾತ್ರಿಯೆಲ್ಲಾ ರೈಲಿನಲ್ಲಿ ಯೋಚನೆಮಾಡಿ ನಿರ್ಧರಿಸಿಬಿಟ್ಟಿದ್ದೇನೆ. ಸದ್ಯ ಈ 'ನೋವೋಕಿಲ್' ನೋಟೀಸುಗಳನ್ನೂ ಪೋಸ್ಟರುಗಳನ್ನೂ ಬಚ್ಚಲ ಒಲೆಗೆ ಹಾಕಿ, ಬಿಸಿನೀರು ಕಾಯಿಸಿ, ಎರಕೊಂಡುಬಿಡೋಣ....ಲೋ, ಕಪನೀ ಬಾರೋ ಇಲ್ಲಿ"—ಎಂದು ಹುಡುಗನನ್ನು ಕೂಗಿದ ಪ್ರಾಣೇಶ.

"ತಾಳಯ್ಯ" ಎಂದರೂ ಕೇಳಲಿಲ್ಲ.

ಅಷ್ಟರಲ್ಲಿ ತಂತಿಯವನು ಬಂದು ಒಂದು ಟೆಲಿಗ್ರಾಂ ಕೊಟ್ಟುಹೋದ ಪ್ರಾಣೇಶನಿಗೆ.

"ಕ್ರಾಸ್‌ವರ್ಡ್ ಮಾವನಿಗೆ ಸೀರಿಯಸ್ ಅಂತೆ ಕಣೋ. ನಾನು ಹೊರಡ ಬೇಕಂತೆ" ಎಂದ ತಂತಿ ಓದಿ.

"ಪಾಪ, ಕ್ರಾಸ್‌ವರ್ಡ್ ನಿಲ್ಲಿಸುತ್ತಾರಂತ ಕೊರಗಿದರೋ ಏನೋ."

"ಹೂಂ ದಕ್ಷಿಣ ಪ್ರದೇಶದ ಕರೆ ಬಂದಿರೋ ಹಾಗೆ ಕಾಣುತ್ತೆ."

"ಹಾಗಂದರೆ....?!"

"ದಕ್ಷಿಣ ಪ್ರದೇಶ ಅಂದರೆ ಯಮಧರ್ಮನ ರಾಜ್ಯ ಕಣಯ್ಯ."

"ಭೇಷ್ ಬಿಡು. ಅಳಿಯನಾಗಿದ್ದು ಸಾರ್ಥಕವಾಯಿತು"—ಎಂದೆ.

"ಕ್ರಾಸ್‌ವರ್ಡ್ ಮಾವ ಸಾಮಾನ್ಯರಲ್ಲ ಕಣಯ್ಯ. ಯಮಧರ್ಮರಾಯನಿಗೂ ಬೆದರಿಕೊಳ್ಳೋ ಹಾಗಿಲ್ಲ. ಆತ "ಕೋಣ ಹತ್ತಿಬಂದರೆ ಅದರ ಕೋಡು ಹಿಡಿದು ನಿಲ್ಲಿಸಿ HELL ಸರಿಯೋ WELL ಸರಿಯೋ ಎಂದು ಕೇಳಿಯೇ ಬಿಡುತ್ತಾರೆ. ಸದ್ಯ ಕುಂಭಕೋಣಂ ನಿಂದ ಬಂದವನು ಕೊಂಚ ಸುಧಾರಿಸಿಕೊಳ್ಳೋಣ ಎಂದಿದ್ದೆ. ಆದರೆ ಹೋಲ್ಡಾಲ್ ಬಿಚ್ಚಿದ ಹಾಗಾಯಿತು" ಎಂದು ತಲೆಕೆರೆದುಕೊಂಡು ಪ್ರಾಣೇಶ್ ಮತ್ತೆ ಹೊರಡುವ ಸಿದ್ಧತೆ ಮಾಡತೊಡಗಿದ. ಕಾಫೀನಾದರೂ ಕುಡಿ. ಮುಖಾ ತೊಳೆದು ಬಾ ಹೋಗು ಎಂದು ಅವನನ್ನು ಒಳಕ್ಕೆ ದಬ್ಬಬೇಕಾಯಿತು

—ರಾಮಿ.

ಎಲ್ಲಾ ಒಳ್ಳೇದಕ್ಕೇ ಅನ್ನಿ

"All is for the best in this best of all possible worlds" ಎಂದು ಲೀಬ್ ನಿಟ್ಸ್ ಮಹಾಶಯ ಹೇಳಿದ್ದನ್ನು ಒಪ್ಪಿಬಿಟ್ಟೆ ಸ್ವಾಮಿ, ಒಪ್ಪಿಬಿಟ್ಟೆ. ನನ್ನನ್ನು ಕವಿದಿದ್ದ ತೊಂದರೆಗಳೆಲ್ಲಾ ಸಿಗರೇಟಿನಂತೆ, ಹಿರೋಷಿಮಾದಂತೆ, ಸುಟ್ಟು ಭಸ್ಮವಾಗುತ್ತವೆ ಅಂತ ನಮ್ಮಪ್ಪನಿಗಿರಲಿ, ನನಗೇನಾದರೂ ಕನಸು ಕೂಡ ಬಿದ್ದಿತ್ತೆ ಸ್ವಾಮಿ? you never can tell, ಸದ್ಗುರುನಾಥಾ! you never can tell,

ಇಂಜಿನಿಯರ್ ಆಗೋಣ ಅಂತ, ಅದರ ಹೆಣಕ್ಕೆ P. C. M. ತಗೊಂಡು ಇಂಟರ್ ಪಾಸ್ಮಾಡಿದೆನಲ್ಲ ನಿಮ್ಮ ಜೊತೆಯಲ್ಲೇ, ಎಂಟನೇ ಸಾರಿಗೆ—ನನಗೂ ನಿಮಗೂ ಸೀಟು ಸಿಕ್ಕಿತೇ ಸ್ವಾಮಿ? ಕಾಲೆಳೆದುಕೊಂಡು ಸೆಂಟ್ರಲ್ ಕಾಲೇಜಿಗೆ ಹೋಗಿ B. Sc. ಸೇರಿದೆನಲ್ರೀ. ಹೊಡೆದವಲ್ಲಾ ಸ್ವಾಮಿ ಅಲ್ಲಿ ಗೋತಾನ! ಸ್ವಾಮಿ ನಿಮ್ಮನ್ನು ಬಿಡಲೇ ಇಲ್ಲ ಬಿ.ಎಸ್ಸಿ. ನಾನೇನೋ ಪಾಸಾದೆ ಅನ್ನಿ. ಕೆಲಸ ಹುಡುಕುತ್ತಿದ್ದೆನಲ್ಲಾ? ಏನಂತಿದ್ರು ಗೊತ್ತೇ? ಯಾರು? ಜನಗಳು ನನಗೆ ಹೇಳುತಿದ್ರು—"ಲೋ ನೀನು ಹಾರುವ, ದ್ರಾವಿಡ ಕಜಗಂ ಕಾಲದಲ್ಲಿ ನಿನಗೆಲ್ಲಿಯ ಕೆಲಸವೋ?" ನನಗೇ ಗೊತ್ತಿರಲಿಲ್ಲರೀ—ನಾನು ಬ್ರಾಹ್ಮಣ ಅಂತ. ಸಾಹಿತ್ಯರತ್ನನ ಜೊತೆಯಲ್ಲೇ ನಾನು ಸಾಬರ ಹೋಟಲ 'ಛಾ' ಕುಡಿಯಲು ಆರಂಭಿಸಿದ್ದೆ. ಮುಂಜಿ ಅಂದ್ರೆ ಉಪನಯನದ ಹಿಂದಿನ ದಿವಸ್ಸನೆ ನನ್ನ ಜನಿವಾರ ನಾಪತ್ತೆ. ಇನ್ನೂ ಹುಡುಕುತ್ತಾನೆ ಇದೀನಿ. ನಾಳೆ ತಪ್ಪಿದ್ರೆ ನಾಳಿದ್ದು ಸಿಕ್ಕೀತು. ಸರ್ಕಾರದೋರು 'ನಿನಗೆ ಕೆಲಸ ಕೊಡಲ್ಲ' ಅಂತ ಏನೂ ಹೇಳಲಿಲ್ಲ. ಅಂದ್ರೆ ಕೊಡಲೂ ಇಲ್ಲ.

ಯಾರ ತಪ್ಪೋ? ಬಿ.ಎಸ್ಸಿ.ಯಾದ ನನ್ನದೋ? ನನಗೆ ಬಿ.ಎಸ್ಸಿ ಯ ಕೊಂಬು ಕಟ್ಟಿದ ಕಾಲೇಜು ಮೇಷ್ಟರದೋ? ಬಿ ಎ ಬಿ. ಎಸ್ಸಿ. ಬೇಡ ಎಂದ ನೆಹರೂವಿನದೋ? ಹರುವನಾದ ನಮ್ಮಪ್ಪನದೋ? ನನ್ನ ಗೋತ್ರನನ್ನಾರಂಭಿಸಿದ ಮಹಾಬ್ರಾಹ್ಮಣ ಕಶ್ಯಪನದೋ? ಅವನಪ್ಪ ಬ್ರಹ್ಮನದೋ? ಅವನಪ್ಪ ಪರಬ್ರಹ್ಮನದೋ? you never can tell, ಗುರುವೇ, ನನ್ನ ಗುರುವೇ, you never can tell.

ಹೀಗಾಗಿ ಮಹನೀಯರೇ ನಿರಾಶನೂ ನಿರುದ್ಯೋಗಿಯೂ ಆದ supposed to be ಭವ್ಯಭಾರತದ ನವಯುವಕನಾದ ನಾನು, ನಿರ್ಭಾಗ್ಯಂ ನಿಸ್ಸಹಾಯಂ ಎಂಬಂತಾಗಿ ಹುಟ್ಟಿದ ಊರಿಗೆ ಅಂದರೆ ಮುಗಿಲಹಳ್ಳಿಗೆ ಹೊರಟೆ. ದಿಗಂತದ ಕಡೆಗೆ ಹೋಗುವ ಬಸ್ ಹತ್ತಿದರೆ ಕೊನೆಗೆ ಬರುವ ಊರಿನ ಹಿಂದಿನದೇ ನನ್ನ ಮುಗಿಲಹಳ್ಳಿ. ಬಸ್ ಸ್ಟ್ಯಾಂಡಿಗೆ ಹೋದೆ. ಬಹಳ ತಡವಾಗಿಬಿಟ್ಟಿತ್ತು. ಬಸ್ಟಾಂಡಿನಲ್ಲಿದ್ದ ಹುಚ್ಚುನಾಯಿಗಳು, ಕತ್ತೆಗಳು, ನೊಣಗಳು ಇವನ್ನು ಬಿಟ್ಟರೆ ಇದ್ದ ಪ್ರಾಣಿ ಒಂದೇ ಒಂದು—The most beautiful girl in the world. ಹೆಚ್ಚೇನು ಹೇಳಲಿ? ಪ್ರಥಮ ದರ್ಶನದಲ್ಲೇ ಪ್ರೇಮ. ಆ ಅಪ್ಸರೆ ನನಗೆ ಹೇಳಿದಳು "ದಿಗಂತದ ಕಡೆಗೆ ಹೋಗುವ ಬಸ್ಸೆಲ್ಲಾ ಹೋಗಿ ಆಯ್ತು. ಉಳಿದಿರುವುದು ಒಂದೇ Love transport service." ಅವಳು ಹಾಗೆ ಹೇಳುವಷ್ಟರಲ್ಲೇ ಬಸ್ಸೂ ಬಂತು. ಅಷ್ಟರಲ್ಲಿ ಇನ್ನೊಬ್ಬ ನವಯುವಕ (May his tribe decrease!) ಓಡಿಬಂದ. ಬಸ್ಸಿನಲ್ಲಿದ್ದುದು ಎರಡೇ ಖಾಲೀ ಸೀಟುಗಳು. ಒಂದು ಸ್ತ್ರೀಯರಿಗೆ, ಒಂದು ಪುರುಷರಿಗೆ. ತರುಣಿ ಒಳಗೆ ಕುಳಿತುಬಿಟ್ಟಳು. ನಾನೋ ಅವನೋ ಎಂಬ ಮೀಮಾಂಸೆ ನಡೆದು ತರುಣಿ ಹೇಳಿದ ಪ್ರಕಾರ ಅವನಿಗೇ ಸೀಟು ಸಿಕ್ಕಿತು. ನಾನು ಹತಾಶನಾಗಿ ಬಿದ್ದು ಬಿಕ್ಕಿ ಬಿಕ್ಕಿ ಅತ್ತೆ, my lord! ಬಿಕ್ಕಿ ಬಿಕ್ಕಿ ಅತ್ತೇ! ಹೃದಯ ಚಕಣಾ ಚೂರಾಯ್ತು. ಎಲ್ಲಾ ಒಳ್ಳೇದಕ್ಕೇ ಅನ್ನಿ. ಆ L.T.S. ಬಸ್ಸು, ಸ್ವಾಮಿ, ಅರ್ಧದಲ್ಲೇ ಅಪಘಾತಕ್ಕೀಡಾಗಿ, ಆ ತರುಣ ತರುಣಿ ಕೆಳಗಿಳಿದರಂತೆ. ಮುಂದೆ ಸ್ವಲ್ಪ ಹೊತ್ತಿನಲ್ಲೇ ಯಾವುದೋ ಒಡ್ಡರ ಗಾಡಿ ಬರಲು ಆ 'ಣ' ಅದನ್ನು ಹತ್ತಿ ನಡೀತಿದ್ದನಂತೆ ಯಮಪುರಿಗೋ, ಕುಂಭಕೋಣಕೋ.

ಅದು ಹೇಗಾದರೂ ಇರಲಿ, ಇತ್ತ ನಾನು ವಾಪಸ್ ಬಸ್ಟ್ಯಾಂಡಿನಿಂದ ಬಂದು ವಿಜಯ ಕೆಫೆ ಅಟ್ಟ ಹತ್ತಿದೆ. ಅಲ್ಲಿ ಅತ್ತಲೂ ಇತ್ತಲೂ, ಎತ್ತೆತ್ತಲೂ ಸಿಗರೇಟು ಹೊಗೆಯೇ ತುಂಬಿರಲು ಪೇಪರಿನ ವಾಂಟೆಡ್ ಮತ್ತು ಮ್ಯಾಟ್ರಿಮೋನಿಯಲ್ ಕಾಲಂ ಗಳನ್ನೆಲ್ಲಾ ಪರಿಶೀಲಿಸಿದೆ. ಏನಿರಬೇಕ್ರೀ ಅಲ್ಲಿ? ಮಣ್ಣು.

ಆದ್ರೆ, ಕಿಸ್ಮತ್ ಖುಲಾಯಿಸಲಿಕ್ಕೆ ಎಷ್ಟು ಹೊತ್ತು ಬೇಕ್ರೀ? ಆ ಪೇಪರಿನಲ್ಲಿ ಒಂದು ಸುದ್ದಿ ಸ್ವಾಮಿ, ನಂಬಿದರೆ ನಂಬಿ ಬಿಟ್ಟರೆ ಬಿಡಿ,—ಬಿಹಾರವಂತೆ, ಆ ದೇಶದ ಮಂತ್ರಿಯೊಬ್ಬರಂತೆ, ಅವರು ಏನೋ ಹೇಳಿದ್ರು ಅಂತ. ಆ ಮಂತ್ರಿಗಳ ಹೊಟ್ಟೆ, ಸ್ವಾಮಿ, ತಣ್ಣಗಿರಲಿ. ಆ ಪುಣ್ಯಾತ್ಮನಿಗೆ ನನ್ನಂತಹ ಹತ್ತು ಹೆಣ್ಣು ಮಕ್ಕಳಾಗಲಿ (ನನಗೆ ಸೀರೆ ಉಡಿಸಿದರೆ, ಸ್ವಾಮಿ, ತಂಡೂರು ರಕ್ಕಸಿ ಅಂತಾರಲ್ಲಾ ತದ್ವತ್). ಆ ಮಂತ್ರಿ ಹೇಳಿದಾನೆ—ಗುಡ್ಡಗಾಡು ಜಾತಿಯವಳನ್ನು ಮದುವೆ ಯಾಗುವ ಪದವೀಧರ. (ನಾನು ಬಿ.ಎಸ್ಸಿ! ವಹ್ವಾ!) ಉಚ್ಚ ಜಾತಿಯ (ಕಾಶ್ಯಪಾ ವತ್ಸಾರ ನೈಧ್ರುವ ತ್ರಯಾರ್ಷೇಯ ಪ್ರವರಾನ್ವಿತ ಅಹಂ! ಭೋ!!) ವಿದ್ಯಾರ್ಥಿಗೆ

(ನಾಳೇನೇ ಎಮ್ಮೆಗೋ ಎಮ್ಮೆಸ್ಸಿಗೋ ಸೇರಿಬಿಡುತ್ತೇನೆ ಅನ್ನಿ) ವರ್ಷಕ್ಕೆ ಮೂರು ಸಹಸ್ರ ರೂಪಾಯಿ ವೇತನ. ಮೊದಲ ಮಗು (ಠಿಂಠಾ ಕರಾಳೋ ವಿಕಟಃ) ಆದ ಮೇಲೆ ವರ್ಷಕ್ಕೆ ಎರಡು ಸಾವಿರ ರೂ.ಗಳು ಯಾರಿಗುಂಟು? ಯಾರಿಗಿಲ್ಲ.

ನನ್ನ ನಸೀಬು ಖುಲಾಯಿಸಿದೆ ಸ್ವಾಮಿ. ಇದೋ ಹೊರಟೆ ಬಿಹಾರಕ್ಕೆ ಓ! ಅವ್ಯಕ್ತ ಸುಂದರೀ! ಅದೃಷ್ಟದಾಯಿನಿ!! 'ಆಯೀ ಹೂಂ ಮೈ ತೆರೆಲಿಯೇ ಸಾರಾ ಜಗ ಛೋಡಕೆ' ಅಂತ ಹೊರಟೇಬಿಟ್ಟೆ. ಅದೃಷ್ಟವಿದ್ದರೆ ಗೇವಾಕಲರ್, ಟೆಕ್ನಿಕಲರ್ ಸುಂದರಿಯೇ ನನಗೆ ಸಿಕ್ಕಾಳು. ನಾಳೆ ಟೆಂಬಕ್ಟು, ವರ್ಗ್ಯೋಯಾನ್ಸಿಕ್, ಒರಾಂಗ್ ಉಟಾಂಗ್ ವಿಶ್ವವಿದ್ಯಾನಿಲಯಗಳಿಗೆ ಹೋಗಿ Ph. D. ಆಗಿಯೇ ಬಂದೇನು. ಆಗ ತಿಂಗಳಿಗೆ ಮೂರು ಸಾವಿರ ಸಿಗುತ್ತದೆ. ಯಾಕ್ರೀ, ಇನ್ನು ಚಿಂತೆ?

ದೇವರಿದ್ದಾನೆ, ಸದ್ಗುರುವೇ, ಖಂಡಿತ ಇದ್ದಾನೆ! ನಿಜವಾಗಿಯೂ ಅವನು ನನ್ನಂಥ ಪಾಮರರನ್ನ ಕಾಪಾಡುತ್ತಾನೆ ಕಣ್ರೀ.

—ಅ. ರಾ. ಸೇ.

ನವೀನ ಗಾದೆಗಳು

ಹಲ್ಲುಬಿದ್ದವರಿಗೆಲ್ಲ ಡಿಲ್ಲಿಯೇ ಗತಿ
ಸಿರಿಗನ್ನಡಂ ತೆಲ್ಗಿಗೆ!
ಸ್ತ್ರೀ ಮಲಯಾಳಂ, ಪುರುಷ ಕರ್ನಾಟಕಂ
ಎಲ್ಲರ ಹೃದಯವೂ ಕೊಂಚ ಎಡಮಗ್ಗುಲಿಗೇನೆ
ಜನ ಸೇವೆಯೇ ಧನಾರ್ಜನ ಸೇವೆ
ಕುರಿ ಆಂದ ಮೇಲೆ, ಗುರಿಯ ಗೋಜೇಕೆ?
ಮಾತಿಗೆ ಮೊದಲೇ ಮೂತಿಗೆ ಏಟು
ಮಾತೃಭಾಷೆ ಶ್ರದ್ಧೆ; ಮಾತೃಭೂಮಿಗೆ ಶ್ರಾದ್ಧ
ವಿಧಾನ ಸೌಧವಾದರೂ, ನಿಧಾನಕ್ಕೇನು ಕೊರತೆ?
ಹಾರಕ್ಕೆ ಅಂತ ಕುತ್ತಿಗೆ ಬಗ್ಗಿಸಿದರೆ, ಕುತ್ತಿಗೆ ಮೇಲೆ ಕೂತೇಬಿಡೋದೆ?
ಮಾವನ ಆಸೆಗೆ ಮದುವೆ ಮಾಡಿಕೊಂಡ ಮೇಲೆ, ಮಗಳು ಹೇಗಿದ್ದರೇನು?
ಬೀಗ ಬೀಗರ ಜಗಳದಲ್ಲಿ, ಪುರೋಹಿತನಿಗೆ ದಕ್ಷಿಣೆ ನಾಸ್ತಿ.
ಪೇಪರಲ್ಲಿ ಹೆಸರು ಬರಲಿ ಅಂತ ಪಾಪರ್ ಚೀಟಿ ತೆಗೆದ.
ಉಂಡೆ ಬೇಡ, ಒಡೆದುಕೊಡು ಅಂದವರು, ಅದೇ ಉಂಡೇನ ಸೇರಿಸಿಕೊಡು ಅಂತಾರೆ.

—o—

ವೈಜೂ ಮಾರಿ

"ಬಾಗಿಲು!"...."ಬಾಗಿಲು"....ಕೂಗಲು ದಿಗಿಲು
ಹೆಂಡತಿ, ಏಕೊ, ಕೋಪದ ಸಿಡಿಲು.

"ವೈಜೂ" ಎನ್ನಲು.....ಪಬ್ಲಿಕ್ ರಸ್ತೆ!
"ವೈಜೂ"....ರೇಗಲು....ಡೈವೋರ್ಸ್ ಭೀತಿ!
"ಕೂಸೇ" ಕೂಗಲು....ತಾಯವಳು!
ಲೀಲಾ ಎನ್ನುತ ಮಗಳನು ಕರೆಯಲು
ಹಿಂದೀ ಕ್ಲಾಸಿಗೆ ಹೋಗಿದೆ ಹುಡುಗಿ.

"ಬಾಗಿಲು", "ಬಾಗಿಲು", ಕೂಗಲು ದಿಗಿಲು!
ವೈಜೂಗೇಕೋ ಕೋಪದ ಸಿಡಿಲು!

ಸಾಮವು ಸೋತಿತು, ದಾನವು ನಿಷ್ಫಲ
ಭೇದಕೆ ಮಣಿಯಳು, ದಂಡವು ವರ್ಜ್ಯ
ಡಾಕಿನಿಯಾದರು, ಕಾಮಿನಿ ವೈ ಜೂ
ಮಧು ಮಧು ಮಾತು, ಒಲಿದಳು ಎಂದರೆ.

ಏಕೊ ಏನೊ ಮನೆಯಾಕಾಶದಿ
ಮೋಡವು ಕವಿದಿದೆ, ಬೆಳಗಿಂದ.

ಬೆಳಗಿನ ಕಾಫಿಗೆ ಸಕ್ಕರೆ ಸಾಲದು
ಸಾರಿಗೆ ಉಪ್ಪೇ ಹಾಕದೆ, ಸಪ್ಪೆ.
ಅಡಿಗೆಯ ಮನೆಯಲಿ ಗಡಿಗೆಯು ಒಡೆಯಿತು
ಕಿಸೆಯಲಿ ಚಿಲ್ಲರೆ ಇರಲೇ ಇಲ್ಲ.
ಮಗುವಿಗೆ ಏಟು, ಆಳಿಗೆ ಬೈಗುಳ,
ಸೈಕಲ್ ಪಂಪು ಸಿಗಲೇ ಇಲ್ಲ
ಮಗಳಿಗೆ ಜಡೆಯೇ ಹೆಣೆದಿರಲಿಲ್ಲ
ತಾನೂ ತಲೆಗೇ ತೈಲವ ಹಚ್ಚದೆ....

ಅಯ್ಯೋ! ವೈಜೂ! ಏಕೀಕೋಪ
ನನ್ನ ಮೇಲೆಯೇ ತಪ್ಪಾರೋಪ?

ನಿಗಿ ನಿಗಿ ನಿಗಿ ನಿಗಿ ನುಲಿಯಲಿ ಇಲ್ಲ
ಬಿಗಿ ಬಿಗಿ, ಬಿಗಿ ಬಿಗಿ, ಅಧರಗಳೆರಡೂ
ಆಫೀಸ್ ಹೋಗಲು ಸಿದ್ಧತೆಮಾಡಿ
ಬಾಗಿಲಹಾಕಿಕೊ, ವೈಜೂ, ಎಂದರೆ
ಬೆನ್ನಿಗೆ ರಪ್ ಎನೆ ಬಡಿದಂತಾಯಿತು
ಅವಳಾ ಬಾಗಿಲ ಬಡಿದಾ ಸದ್ದು!
ಮಾರಿಯ ಮೋರೆಯು ತೋರಿದಳು
ಕಿಟಕೀ ಕಂಬಿಯ ಒಳಗಡೆಯಿಂದ.

ಗಂಡನ ಹೊರಗಡೆ ನಿಲ್ಲಿಸಿ ನೀನು
ಭಂಡ ಕೋಪವನು ಬೀರುವಿಯೇನು?

ಈಗವಳೀಚೆಗೆ ಬಾರಳೊ ಬರುವಳೊ
ಉರಿಮೊಗವೊ ಮೇಣ್ ಕಿಡಿಕಿಡಿ ವದನವೊ
ಯಾವುದತರುವಳೊ, ಬಾಗಿಲ ತೆರೆವಳೊ,
ಪೊರಕೆಯೊ, ಹರಕೆಯೊ, ನಗೆಯೊ, ಹೊಗೆಯೊ,
ಒಂದೇ ಕಾಲಲಿ ತಪವನು ಗೈಯ್ಯುತ
ಡವಡವ ಬಡಿಯುವ ಎದೆಯನು ಅದುಮುತ
ಜಿಲೇಬಿ ಪೊಟ್ಟಣ ಚೋಳಿಯ ಕಣಗಳ
ಎಡಗೈಯಲ್ಲೇ ಹಿಡಿದಾಗಂಡನು

"ಬಾಗಿಲು!" "ಬಾಗಿಲು!"....ಕೂಗಲು ದಿಗಿಲು!
ಗಂಟಲೆ ಏಳದು!....ಬೆರಳಿಗೆ ನಡುಕ!

"ಅಯ್ಯೋ! ವೈಜೂ!....ಏಕೀ ಕೋಪ!
ನನ್ನ ಮೇಲೆಯೆ ತಪ್ಪಾರೋಪ?"

—ನಾ. ಕ.

— o —

ಹಾದಿಯಲ್ಲಿ ಕೇಳಿಸಿದ್ದು

"ಏನ್ರೀ—ಈಗ ಯೋಚಿಸ್ತಾ, ಇರೋಹಾಗೆ ಎರಡು ಮೂರು ಪ್ರಾಂತ್ಯಗಳನ್ನ ಸೇರಿಸಿ ಒಂದೇ ಪ್ರಾಂತ್ಯ ಮಾಡಿದರೆ—ಆಗ ಮಂತ್ರಿಗಳ ಸಂಖ್ಯೇನೂ ಹೆಚ್ಚಿಬಿಟ್ರೆ —ಪ್ರತಿ ಊರಲ್ಲೂ ಖಾಯಂ ಆಗಿ ಸಿಮೆಂಟು ಕಂಬಗಳನ್ನಾ, ಹಿತ್ತಾಳೆ ಎಲೆ ತೋರಣಗಳನ್ನಾ ಕಟ್ಟಿಹಾಕಿ ಬಿಟ್ರೆ—ಪ್ರತಿದಿನ ಎಲೇ ಹುಡುಕೋದು ತಪ್ಪು ತ್ತಲ್ವೇನ್ರಿ?"

ಮೂದರೀ ಸಂಭಾಷಣೆ

"ಏನ್ ಸಾರ್—ಕೇಳಿದಿರಾ? ನಮ್ಮ ಭೂಮಿಗೂ ಸೂರ್ಯನಿಗೂ ಇರೋ ದೂರ? ಎಷ್ಟೋ ಕೋಟಿ ಮೈಲಿಗಳಂತೆ! ಏನು ಸಾರ್—ಸೂರ್ಯನ ಶಕ್ತಿ!"

"ಅಯ್ಯೋ! ಹೌದ್ರೀ!! ಭೂಮಿಗೂ ಸೂರ್ಯನಿಗೂ ಎಷ್ಟು ದೂರವಿದ್ದರೇನ್ರಿ? ಸೂರ್ಯ ಅಂದರೆ ನಮ್ಮ ಸೈಕಲ್ ಲ್ಯಾಂಪು ಕೆಟ್ಟುಹೋಯ್ತೇ? ಸೂರ್ಯನ ಉಷ್ಣಾಂಶ ಎಷ್ಟು ಗೊತ್ತೇನ್ರಿ?"

"ಗೊತ್ತೂ ಸಾರ್—ಗೊತ್ತು. ಎಷ್ಟೋ ಲಕ್ಷಾಂತರ ಡಿಗ್ರಿಗಳಂತೆ!"

"ಮತ್ತೆ ಅಷ್ಟು ಲಕ್ಷಾಂತರ ಉಷ್ಣ ಇರೋ ಸೂರ್ಯ ಎಷ್ಟು ದೂರವಿದ್ದರೇನ್ರಿ? ಸೂರ್ಯನ ಮಾತಿರಲ್ರಿ!—ನಮ್ಮ ಅಂಗಾರಕ ಎಷ್ಟು ದೂರವಿರಬಹುದ್ರೀ?"

"ಅದೂ ಗೊತ್ತಿಲ್ವೆ? ಎಷ್ಟೋ ಲಕ್ಷಾಂತರ ಮೈಲಿಗಳಂತೆ!"

"ನಿಜ—ಆದರೆ ಅಲ್ಲಿ ಈಗ ಜನರಿದ್ದಾರೇಂತ ತಿಳಿದುಬಂದಿದೆ ಗೊತ್ತೇನ್ರಿ?"

"ಅಯ್ಯೋ ರಾಮಾ! ನಂಗದು ಗೊತ್ತಿಲ್ದೆ ಏನ್ರೀ ಕೇಡು? ಏನೋ ಹೀಗೇ ಅಮೆರಿಕಾಕ್ಕೂ ರಷ್ಯಾಕ್ಕೂ ಬಿಗಡಾಯಿಸ್ತಾ ಬಂದ್ರೆ ನಾವೂ ನೀವೂ ಅಲ್ಲೇ ಹೋಗ ಬೇಕಾಗುತ್ತೋ ಏನೋ—ಹಿ! ಅ!! ಹಿ!!!"

"ಪಾಪ! ಇದರಲ್ಲೆಲ್ಲಾ ಚಂದ್ರಂದೇ ಅವಸ್ಥೆ!"

"ಯಾಕ್ರೀ—ಅವನಿಗೇನ್ರೀ ಆಗಿದೆ?"

"ಇದೇನ್ರಿ ಹೀಗೆ ಕೇಳ್ತೀರಿ? ಚಂದ್ರಂಗೆ ಪ್ರಕಾಶ ಎಲ್ಲಿದೇರಿ? ಚಂದ್ರ ಸೂರ್ಯ ನಿಗೆ ಕನ್ನಡಿ ಇದ್ದಾಗೆ ಅಷ್ಟೆ ಅಲ್ಲೇನ್ರಿ?"

"ಅಯ್ಯೋ—ಅದೆಲ್ಲಾ ನಂಬ್ತೀರಾ ನೀವು? ಸೂರ್ಯ ಅಂದರೆ ನಂಗೇನೂ ಹೆಚ್ಚು ಕಾಣೋಲ್ಲಾಪ್ಪಾ. ಹಗಲಿನಲ್ಲಿ ಬೆಳಕು ಕೊಡೋಕೆ ಸೂರ್ಯ ಏನ್ರಿ ಕಷ್ಟ ಪಡಬೇಕು? ಇನ್ನೂ ಹೇಳಿ—ರಾತ್ರಿ ಹೊತ್ತು ಬೆಳದಿಂಗಳು ಕೊಡ್ತಾನಲ್ಲಾ ಚಂದ್ರ —ಅವನ ಪ್ರಕಾಶವಲ್ದೆ ಇನ್ನೇನು?"

"ಹೌದಲ್ರೀ! ನಂಗೆ ಇದು ಹೊಳೀಲೇ ಇಲ್ಲ. ಅದಕ್ಕೇ ಇರಬೇಕು—ಈಗ ರಷ್ಯಾದೋರು ಅಮೇರಿಕಾದೋರೂ ಅಮಾವಾಸ್ಯೇ ದಿನಗಳಲ್ಲೂ ಬೆಳದಿಂಗಳು ಇರ್ಲೀಂತ ಈಗ ಭೂಮಿಗಾ ಸುತ್ತಾ ಇನ್ನೂ ಐದಾರು ಚಂದ್ರರನ್ನ ಇಡತಾರಂತೆ!"

"ಅಬ್ಬ—ಏನು ವಿಜ್ಞಾನವಪ್ಪಾ!"

—"ಕೇಶ"

ಹಿಂದು, ಮುಂದು, ಎಂದು?

(ನವ್ಯ, 'ಸರಳ ರಗಳೆ')

(ಮುನ್ನುಡಿ :—ಛಂದಸ್ಸು, ಅರ್ಥ ಮುಂತಾದ ಸಂಪ್ರದಾಯಗಳ ಬಂಧನಕ್ಕೆ ಸಿಕ್ಕಿ ಬಿದ್ದರೆ, ನನ್ನಂತಹ ಪ್ರತಿಭಾವಂತ ಕವಿಗಳ ಆವಿಷ್ಕಾರಕ್ಕೆ ಅವಕಾಶ ವಾದರೂ ಎಲ್ಲಿ? ಆದ್ದರಿಂದ ಅವುಗಳನ್ನೆಲ್ಲಾ ತೊರೆದು, 'ಭಾವ ಭಾಷಾ ತೀತ', 'ವಾದ ವೇದಾತೀತ', 'ರಸ, ಅರ್ಥ ಅತೀತ'ವಾದ "ಭಾಷೆಯ ಅಲ್ಲದ ಅರ್ಥವೇ ಇಲ್ಲದ, ರಸವನ್ನು ಮೀರಿದ ಈ ಅತಿ ವಾಙ್ಮಯ ವೇದ ವನ್ನು ಸೃಜಿಸಿದ್ದೇನೆ.)

ಇದೊ ಆರಂಭ ಮಾಡಿಹೆನ್
ಈಗಾನ ಬರೆಯುಲ್, ಕೇಳಿಂ, ಕೇಳಿಂ.
ಇನಿತು ತಡೆಯಿರಿ, ಮಿದುಳ ಕೆಳಗಿಟ್ಟು ಬರೆಯುವೆ
ನವ ನವ್ಯ ಕಾವ್ಯ ಸ್ಫೂರ್ತಿಯು ಅದುವೆ ಅಲ್ಲವೆ?!?

ಕೇಳು ಹನುಮೇಜಯ ದರಿದ್ರೀಪಾಲ
ಅಸತೋಮಾ ಸದ್ಗಮಯ
ಮೃತ್ಯೋರ್ಮಾ ಅಮೃತಂಗಮಯ
ಎಲ್ಲವೂ ಆಟಂಮಯ ಹಾಗೂ ಆಟಮಯಾ!; ?=

ಹೇಳೊ ಹನುಮ್ಯಾ ನೀನೆ ಹೇಳಲೆ
ಆಲಿಯು ರಾಜಿನಾಮೆಯನಿತ್ತರೇನಂತೆ
ಗರಿಯಾಡದೇ ಹೇಳು ಮರದಲ್ಲಿ?
ಅದು ಹಾರದೇ ಗಾಳಿ ಬಂದಲ್ಲಿ?

ಪಿಂತೆ ಡ್ಯಾಫಷ್ಟರ್ ಬ್ಯಾಂಡಿನ[1] ಹುದ್ದೆಯಿಂ-
-ದಧಿಕಾರ ಕೇರಿದ ಸಾಲಜಾರ್. "ಕೊಡೆ
ನಾ ಭೂದಾನ"ವೆನ್ನುತಾನಂತೆ. ಆದರೇನಂತೆ?
ಸಾಲ ಸಾಲವೆ, ಜಾರ ಜಾರನೆ, ಅಲ್ಲದೇನಂತೆ! ÷

---

[1]ದಪ್ಪುರಬಂದಿ.

ಪಡವದಿಕ್ಕಿನಲಿ ಇಹುದಂತೆ
ಅದು ಜೂರುಗಾರರ ನಾಕವಂತೆ
ಕಡಿದು ಮಲಗಿದ ಹುಚ್ಚನಾ
ಸವಿಗನಸಿನಾ ಸಾಮ್ರಾಜ್ಯದಂತೆ
"ನೋಡದನು ಮನದ 'ದೂರದರ್ಶಿನಿ'ಯಿಂದ"
(ಇದು ನಮ್ಮ ಉಪಮಾನ)

ದೀವಳಿಗೆಯ ಸಂಭ್ರಮದಲಿ
"ಕೇವಲ" ಚಟಾಕಿಗಳ ಮೂಲೆಗೊಟ್ಟು
ಅಣು ಬಾಂಬುಗಳನೆ ಹಾರಿಸಲಿಹ
ಆ ಷೋಕಿಯ ನೋಡಲ್ಲಿ.
ನೋಡು, ಅತಿಯಾಗಿ ನೋಡು,
ಮಹತಾಗಿ ನೋಡು, ಭೃಹತಾಗಿ ನೋಡೂ....

ಸಾಕಿನ್ನು ನೋಡಿದ್ದು, ರೈಟಬೌಟರ್ನ್
ಇಂತಪ್ಪ ನೋಟಂಗಳಂ ನೋಡಿ
ದೆವ್ವದೊಳ್ ಸೊರ್ಕುನುಡಿ
ನುಡಿಯದಿರದಿರ್. ಅಂತೆ ಪೇಳ್
"ಆಲಿ" ಬಿದ್ದರೆ ಹೆಂಚು ಒಡೆಯುವುದೇ?

[ಬಿ. ಎಂ. ಶ್ರೀ. ಯವರ ಕ್ಷಮೆ ಬೇಡಿ, 'ಅಶ್ವತ್ಥಾಮನ್'ನಿಂದ ಕೆಲವು ಪದ್ಯಗಳನ್ನು ಉಪಯೋಗಿಸಿಕೊಂಡಿದ್ದೇನೆ]

—ಶೆಡ್ಡಿ.

—o—

ಭೂದಾನ—ಒಬ್ಬರ ಕೈಯಿಂದ ಮಣ್ಣನ್ನು ತೆಗೆದುಕೊಂಡು ಮತ್ತೊಬ್ಬರ ಕೈಗೆ ಕೊಟ್ಟು ಅದನ್ನು "ಸರ್ವೋದಯ" ಎಂದು ಕರೆದು ಕೈಕೊಡವಿಕೊಳ್ಳುವುದು.

ಪಂಚವಾರ್ಷಿಕ ಯೋಜನೆ—ಇನ್ನೈದು ವರ್ಷ ಸರ್ಕಾರವನ್ನು ಉಳಿಸಿಕೊಳ್ಳುವ ಸಲುವಾಗಿ ಮಾಡುವ ಒಂದು "ಪ್ಲ್ಯಾನು".

ಪ್ರಾಚೀನ ಕವಿ ಜೀವನವಿಚಾರ

(ಪರಿಸಮಾಪ್ತಿ ಲೇಖನ)

ರಾಯಚೂರಿನಲ್ಲಿ ಹಾಗಾಗಲಿಲ್ಲ! Old Timers Vs. Upstart Crows ಕ್ರಿಕೆಟ್ ಮ್ಯಾಚಿನಲ್ಲಿ ಹಳಬರಿಬ್ಬರೇ ಸೇರಿ ಸಾವಿರಾರು ಹೊಸಬರ ಮೇಲೆ ಮೂರು ಇನ್ನಿಂಗ್ಸ್ ಮತ್ತು ಹದಿನಾರು ವಿಕೆಟ್ಟುಗಳ ಜಯಗಳಿಸಿದರು

ಡಿ. ಎಲ್. ನರಸಿಂಹಾಚಾರ್ಯರು ಮತ್ತು ಎ. ಅನಂತರಂಗಾಚಾರ್ಯರು— ಕನ್ನಡನಾಡಿಗೊಂದು ಪ್ರಾಕ್ತನ (ಪ್ರಾಚ್ಯ) ಸಂಶೋಧನಾಲಯಬೇಕೆಂದು ನಿರ್ಣಯ ತಂದು ಅನುಮೋದಿಸಿಯೂ ಬಿಟ್ಟರು. ಅರ್ಥವರಿಯದ ಸಭೆ 'ಜೈ' ಎಂದಿತು. ಚಪ್ಪಾಳೆಯಿಂದ ಶತ್ರುಗಳ ಹೃದಯ ನಿಂತುಹೋಯಿತು. ನಮಗಿದು ಖುಷಿಯ ಸಮಾಚಾರ.

ಪ್ರಾಚೀನ ಕವಿಜೀವನ ಸಂಶೋಧನೆಯ ಕಾರ್ಯಶ್ರಮ ನಮಗೆ ಬಹಳವಾಗಿತ್ತು. ಕವಿ ಚರಿತೆಯಲ್ಲಿರುವ ಒಬ್ಬೊಬ್ಬ ಕವಿಯ ಜೀವನವನ್ನೂ ನಾವು ವಿವರಿಸಲಾರದವರಾಗಿರುವೆವು. ಕ್ರಿಸ್ತ, ಕೈಲಾಸಂಗಳು ಹೇಳಿದಂತೆ ವಿಲ್ ಈಸ್ willingoo, ಬಟ್ ಫ್ಲೆಷ್ ಈಸ್ ವೀಕೂ. ಮನೆಯಲ್ಲಿ ಅಣ್ಣನ ಕೋಪ, ಹೊರಗಡೆ ಮಿತ್ರರ ಭರ್ತ್ಸನೆ, ಅಂಗಡಿಯಲ್ಲಿ Bossಿನ ನಿಂದನೆಗಳನ್ನು ಸಹಿಸಿ ನಮಗೆ ಸಾಕಾಗಿದೆ. ಸಂಪಾದಕರೇನೋ ನಮ್ಮ ಲೇಖನಗಳನ್ನು ಮುಖದಾಕ್ಷಿಣ್ಯದಿಂದ ಪ್ರಕಟಿಸಿದರು; ಸುತ್ತಾರೆ. ಅಸಗನು ಧವಲನಿಗೆ ಕಾಟಕೊಟ್ಟಂತೆ ನಾವು ಅವರಿಗೆ ಕಾಟಕೊಡಲಾರೆವು.

ಈಗಲಾದರೋ ನಮ್ಮ ಹೆಗಲ ನೊಗ ಕಳಚಿತು. ತಲೆಭಾರವಿಳಿಯಿತು. ಸಹಸ್ರ ಸಂಖ್ಯಾತ ಸಮಸ್ಯೆಗಳನ್ನು ಏಕಾಂಗಿಯಾಗಿ ಇದುರಿಸುವ ಸಾಹಸಮಾಡುವುದು ಇನ್ನು ನಮ್ಮ ಪಾಲಿಗಿಲ್ಲ:—ಕಂತಿ-ಪಂಪರ ಪ್ಲೆಟಾನಿಕ ಲವ್ವ (?)—

ಕೊಟ್ಟವರ ಗಂಟ ಹಿಂತಿರುಗಿ ಕೊಟ್ಟೊಡೆ ನಿಮ್ಮಾಣೆ ನಿಮ್ಮ ಶರಣರಾಣೆ ಎಂದು ಬಸವಣ್ಣನವರು ಹೇಳಿದರೇ? ಇಲ್ಲವೇ? ಅಥವಾ ಹಾಗೆ ಹೇಳಿದವರು ಅಧುನಿಕರೇ?—

'ನೀನಲ್ಲದೊಡೆ ನಿನ್ನ ಅಪ್ಪ ತಂದನೆ ಇದಂ' ಎಂದು ಕೆರೆಯುಪದ್ಮರಸನು ಕೋಡಿಯ ವಡ್ಡಂಗೆ ಹೇಳಿದನೇ? ಏಕೆ?—

ಚಾಮರಸನ ಕಾವ್ಯವನ್ನು ಪರೀಕ್ಷಕರು ಹಿಂಡಿದಾಗ ಅದರಿಂದ ರಕ್ತ ಸುರಿಡಿ ತೆಂದು ಹೇಳುವರಲ್ಲಾ — ಚಾಮರಸನು ತಾಳೆಯೋಲೆಯ ನಡುವೆ ಚೂರಿ ಇಟ್ಟಿದ್ದನೆ?

ಕನ್ನಡ ಕವಿಗಳಲ್ಲಿ ಎಷ್ಟು ಜನ ಕವಿಗಳಿದ್ದಾರೆ ?—

ಈ ಪ್ರಶ್ನೆಗಳ ವಿವೇಚನೆಯನ್ನು ಕರ್ಣಾಟಕ ಪ್ರಾಕ್ತನ ಸಂಶೋಧನ ಸಂಸ್ಥೆಯೇ ಮಾಡಲಿ.

ಸಂಚಿಯ ಹೊನ್ನಮ್ಮನು ಅರಮನೆಯ ಸವತಿಯರ ಬಳಗದಲ್ಲಿದ್ದಳು ಎಂದು ಕನ್ನಡ ಸಾಹಿತ್ಯ ಚರಿತಕಾರರೆಂದರೆ ಅಲ್ಲ ಎಂದು ನರಸಿಂಹ ಶಾಸ್ತ್ರಿಗಳು ಹೇಳುತ್ತಾರೆ. ಚಿಕ್ಕದೇವರಾಜ ಒಡೆಯರು ಈಗ ಬದುಕಿದ್ದಿದ್ದರೆ ಇಬ್ಬರನ್ನೂ ಇಡೀ ನುಂಗುತ್ತಿದ್ದರೇ ?

ಸಾವಿರಾರು ಕನ್ನಡ ಕವಿಗಳ ಕೊಳಲ ರಾಗದ ರಹಿ, ಅವರು ತಿಂದ ಕಲ್ಲಿಯ ಕಲಸುಗೂಳು. ಅವರು ಮಾಡಿದ ಹಳ್ಳಿಕಾತಿಯರೊಳಗುಡಿಯ ಹಾದರ ಇವುಗಳ ವಿಶ್ಲೇಷಣೆಯನ್ನು, ನಾವೇ ಮಾಡಿ ತಲೆ ಕೆಡಿಸಿಕೊಳ್ಳಲಾರೆವು.

ಅಲ್ಲದೆ–ಕನ್ನಡ ಕವಿ ಚರಿತೆಯ ಕವಿಗಳೆಲ್ಲರ ಗ್ರಂಥಗಳೂ ಸಿಗುವುದಿರಲಿ, ನಾಲ್ಕೈದು ಜನರ ಹೊರತು ಉಳಿದವರ ಗ್ರಂಥಗಳು ಬರೀ ಊಹಾ ರಚಿತವಾಗಿವೆ. ಸಿಕ್ಕಿರುವ ಗ್ರಂಥಗಳು ಅಪ್ರಯೋಜಕ – ಅಪೂರ್ಣ. ಇಷ್ಟೊಂದು ಗ್ರಂಥಗಳು ಸಿಕ್ಕದಿರಲು ಇದಕ್ಕೆ ಕಾರಣವನ್ನು ನಾವು ಕಂಡುಹಿಡಿದಿದೇವೆ. ಕ. ಪ್ರಾ. ಸಂ.ಗೆ ನಮ್ಮ ಸಂಶೋಧನೆಯ ಸಾರವನ್ನು ತಿಳಿಸಿ ಅವರೆದುರು ಇರುವ ಮಹತ್ಸಮಸ್ಯೆಯನ್ನು ತಿಳಿಸಿ ನಾವು ವಿರಮಿಸುವೆವು.

ಕನ್ನಡ ಸಂಶೋಧಕರು ಈ ಪುಸ್ತಕ ಚೋರನನ್ನು ಹುಡುಕಲು ಯತ್ನಿಸಿ ವಿಫಲರಾಗಿರುವರು. ನಮಗೆ ಕಳ್ಳ ಸಿಕ್ಕಿದಾನೆ. ಮಾಲು ನಾಪತ್ತೆ.

ಈ ಪ್ರಸಂಗದ ವಿವರಗಳು ಕೆಳಗೆ ಕಂಡಂತಿವೆ.—

ಜನನಾಥಂ ಜಗದೇಕನಲ್ಲಿ ಕಟುಕೋಪಾಧ್ಯಾಯನಾಗಿದ್ದ ನಾಗವರ್ಮನನ್ನು ನೀವೆಲ್ಲ ಬಲ್ಲಿರಿ ಹುಡುಗರ ಚರ್ಮ ಸುಲಿಯುತ್ತಿದ್ದುದರಿಂದ ಅವನಿಗೆ ಚರ್ಮ ವರ್ಮನೆಂದೂ ಹೆಸರುಂಟು. ಅವನಿಗೊಬ್ಬ ಮರ ಶಿಷ್ಯನಿದ್ದ. ಹೆಸರೋ! ಸುಮನೋ ಬಾಣ. ಅವನೂ ಕಾಲಕ್ರಮದಲ್ಲಿ ಉಪಾಧ್ಯಾಯನಾಗಿ ಹುಡುಗರ ಚರ್ಮ ಸುಲಿಯುವ ಕೆಲಸಕ್ಕೆ ನಿಂತನು. ಹುಡುಗರು ಆ ಸುಮನೋಬಾಣನ ಹೊಡೆತ ತಡೆಯಲಾರದೆ ಕಟುಕೋಪಾಧ್ಯಾಯನಾರ್ ? ಎಂದು ಕೇಳುತ್ತಿದ್ದರು.

ಅವನ ಮಗ ಜನ್ನ. ಬಲ್ಲಾಳನಿಂದ ಕವಿಚಕ್ರವರ್ತಿ ಎಂದು ಬಿರುದು ಪಡೆದನು ಜನ್ನ. ಅವನ ಪ್ರೈವೇಟ್ ಲೈಫ್ ಹೊಲಸು. ಯಶೋಧರ ಚರಿತೆ

ಓದಿ. ಅವನಿಗೂ, ಅವನ ಹೆಂಡತಿಗೂ, ಈ ಕಾರಣದಿಂದಲೇ ಜಗಳವಾಗಲು ಅವಳು ತವರುಮನೆಗೆ ಹೋಗಿದ್ದಿರಬಹುದು.

ಈ ಮಧ್ಯೆ ಜೀವದಯಾಷ್ಟಮಿ ಬಂತು. ಜನ್ನ ಉಪವಾಸ ಮಾಡಿದ. ಜಿನ ಮಂದಿರದಲ್ಲಿ ದಿನವೆಲ್ಲಾ ಕುಳಿತು, ರಾತ್ರಿಯೆಲ್ಲಾ ನಿದ್ದೆಗೆಟ್ಟು ಪುರಾಣ ಕೇಳಿದನು. ಬೆಳಗಾಗಲು, ಮನೆಗೆ ಬಂದನು. ಅಡುಗೆಯಾಳು ಓಡಿಹೋಗಿಬಿಟ್ಟಿದ್ದ. ಅವನನ್ನು ಹುಡುಕಲು ಉಳಿದ ಆಳುಗಳು (ಅವರಿದ್ದರೆ?) ಮಧ್ಯಾಹ್ನದವರೆಗೂ ಅಲೆದು, ಹುಡುಕಿ, ಹಿಡಿದುಕೊಂಡು ಬಂದರು.

ಅಷ್ಟುಹೊತ್ತಿಗೆ ಜನ್ನನಿಗೆ ಸ್ಫೂರ್ತಿ ಬಂದಿತು ಇತಿಹಾಸದ ಸಮುದ್ರದಂತಿದ್ದ ಅವರಪ್ಪನ ಪುಸ್ತಕ ಭಂಡಾರದ ಒಂದೊಂದು ಗ್ರಂಥಗಳನ್ನೂ ಹೊರಗೆಳೆದು ವಿಷಯ ಸಂಗ್ರಹಿಸಿ ಕಂದ ಪದ್ಯಗಳನ್ನು ರಚಿಸುತ್ತಿದ್ದ. ಆ ಪುಸ್ತಕಗಳ ಕಟ್ಟನ್ನು ಕೆಳ ಗೆಸೆಯುತ್ತಿದ್ದ.

ಇತ್ತಲೋ, ಅಡುಗೆ ಮನೆಯಲ್ಲಿ ಕಟ್ಟಿಗೆ ಇರಲಿಲ್ಲ. ಅಡುಗೆಯಾಳು ಆ ಪುಸ್ತಕ ಗಳನ್ನು ಹೊತ್ತಿಸಿಯೇ ಅಡುಗೆ ಮಾಡಿಬಿಟ್ಟ. ಆ ದಿನವು ಕನ್ನಡ ಸಾಹಿತ್ಯದ ಜ್ವಲಂತ ದುರಂತ ದುರ್ದಿನಗಳಲ್ಲೊಂದು. ಜನ್ನನ ಊಟವಾಯಿತು. ಹಸಿವಾರಿತು. ಅಗಲವನಿಗೆ ಅರಿವಾಯಿತು. ಕನ್ನಡದ ಸುಕವಿಗಳನೇಕರ ಕಾವ್ಯವನ್ನು ದಹಿಸಿದವನು ತಾನೇ ಅಲ್ಲದಿದ್ದರೂ ತಾನದಕ್ಕೆ ಕಾರಣನೆಂದು ಅಡಿಗೆಯುವನ ಮೇಲೆ ರೋಷ ಬಂತು ಅವನನ್ನು ಬಡಿದ, ಚರ್ಮ ಸುಲಿದ, ಒಣಮೆಣಸಿನಕಾಯಿ ಹೊಗೆ ಹಾಕಿದ, ಮೈಮೇಲೆ ಬೆಲ್ಲದ ಪಾಕ ಸುರಿದು ಇರುವೆಗಳನ್ನು ತಂದು ಅವನ ಮೇಲೆ ಬಿಟ್ಟ. ಇದು—ಜನ್ನನು ನ್ಯೂಟನನಿಗಿಂತ ಬುದ್ಧಿವಂತನೆಂದು ತೋರಿಸುತ್ತದೆ.

ಆದುದು ಆಗಿಹೋಯಿತು. ಜನ್ನನು ತನ್ನ ತಪ್ಪನ್ನರಿತುಕೊಂಡು ಸುಕವಿ ಭಾಳಲೋಚನನೆಂದು ಬಿರುದನ್ನಿಟ್ಟುಕೊಂಡ (ಸುಕವಿಗಳ ಕಾವ್ಯ ಕಂದರ್ಪನನ್ನು ದಹಿಸಿದ ಭಾಳಲೋಚನನು ಯಾರೋ ಅವನು-ಬಹುವ್ರೀಹಿ).

ಹೀಗಾಗಿ ಕನ್ನಡ ಕವಿಕಾವ್ಯ ಜೀವನ ಸಂಶೋಧನೆ ದುಸ್ತರವಾಗಿದೆ. ಇದನ್ನು ಕ. ಪ್ರಾ. ಸಂ. ಸಂ. ಯಶಸ್ವಿಯಾಗಿ ನಡೆಸಲಿ ಎಂದು ಹಾರೈಸುವಾ.

ಹೇಳುವುದು ಮುಗಿಯಿತು. ಇದನ್ನು ಕೇಳಿ ಸಹಿಸಿದ ನಮ್ಮ ವಾಚಕರ ಬಗ್ಗೆ ನಮ್ಮ ಸಂಪೂರ್ಣ ಸಹಾನುಭೂತಿ ಉಂಟು.

ಕನ್ನಡ ಕವಿಗಳ ಬವಣೆಯ
ಬಣ್ಣಿಸಿ ಬರೆದಂ ತರಲೆಯುರಾಸೆ ರಾಶಿಯದಂ
ಮಿಣ್ಣನೆ ಪ್ರಕಟಿಸೆ, ಓದುವ
ಕಣ್ಣೀರ್ಗರೆವ ವಾಚಕರ್ಗೆ ಬಂತೈ ವಕ್ರಂ.

—o—

★ ರೆಕ್ಕೆ ಬಂದ ರೇಡಿಯೋ ★

ಸುತ್ತಮುತ್ತ ಹಾರುತಲಿವೆ ರೆಕ್ಕೆ ಬಂದ ರೇಡಿಯೋ!
ಈ ನಗರದ ನೈರ್ಮಲ್ಯದ ಸಂದೇಶದ ಮೋಡಿಯೋ!
ಆಹಾ, ಆಲಿಸಯ್ಯ ಎಂಥ ಗೀತವಾದ್ಯ ಗಾರುಡಿ
ಒಮ್ಮೆ ಅಲ್ಲಿ ಒಮ್ಮೆ ಇಲ್ಲಿ ನಾಕ–ನರಕ ಮೂರಡಿ!

'ಸೊಳ್ಳೆ'–ಎನ್ನಬಹುದೆ ಇಂಥ ಸಂಗೀತದ ಮರಿಗಳ
ಬಿಟ್ಟುಗಾನವೆರೆವ ನೆಲದ ಗಂಧರ್ವರ ಬಳಗವ ?
ನಮ್ಮ ದೇಹದಾರೋಗ್ಯವನಳೆವ ರಕ್ತಮಾಪಕ !
ಇವೂ ವೈದ್ಯರೊಂದೆ ಎನಲು, ಅಹುದಲ್ಲವೆ ರೂಪಕ ?

ಅಹಾ ಕೇಳು, ಕತ್ತಲನು ಮಿಡಿದು ಕಡೆದು ಬರುತಿವೆ.
ಸದಾ ಎಚ್ಚರಾಗಿರೆಂದು ಚುಚ್ಚಿ ಚುಚ್ಚಿ ಹಾಡಿವೆ!
ಸೊಳ್ಳೆಪರದೆಯೊಳಗೆ ಕುಳಿತು ಕೇಳು ಸುತ್ತ ಗಾನವ,
ಇಲ್ಲದಿರಲು ನೀನೆ ಬಲ್ಲೆ ಏನೆಂಬುವ ಅನುಭವ!

—ದಿಬ್ಬಯ್ಯ.



"ಪಕ್ಕದ ಮನೇಲಿ ನಿನ್ನೆ ಸಾಯಂಕಾಲ ವಿಪರೀತ ಅಳ್ತಾ ಇದ್ದದ್ದು ಕೇಳಿಸಿತು—ಗಾಬರಿಯಾಗಿ ಹೋಗಿ ನೋಡಿದರೆ – ಹೊಸ ರೇಡಿಯೋ ಹಾಕಿದ್ದರು"

“ಅಂಕಿ ಅಂಶಾಚಾರ್ಯ ಆಗಂತುಕ”

ಸುಮಾರು ೩೦–೩೫ ವಯಸ್ಸು ಇದ್ದಿರಬಹುದು, ತರಚಲು ಮೀಸೆ; ಗಾಳ ನೋಡಿದ ಮೀನಿನಂತೆ ಕಣ್ಣು. ಕರೀಟೋಪಿ ತಲೆಯಮೇಲೆ ಹಿಂಭಾಗಕ್ಕೆ ಆತುಕೊಂಡೇ ಕೂತಿತ್ತು. ನಿಮಿಷದಲ್ಲಿ ೪೫ ಸೆಕೆಂಡು, ಬಲ ಬೆರಳನ್ನು ಬಲ ಕಿವಿಯ ಮೇಲಾಡಿಸುತ್ತಿದ್ದ. ಅವನ ಕಸುಬು ಯಾವುದಿರಬಹುದು, ಅವನ ಯೋಗ್ಯತೆ ಹೇಗಿರಬಹುದು, ಎಂಬುವ ಸೂಚನೆಗಳು ಯಾವುವೂ ಅವನ ಮುಖದಲ್ಲಿ ಕಾಣಬರುತ್ತಿರಲಿಲ್ಲ ಸಾವಿರ ಕುರಿಗಳ ಮಂದೆಯಲ್ಲಿರುವ ಕುರಿಯ ಮುಖದ ಮೇಲಿರುವ, ಕೇವಲ ಸಾಮಾನ್ಯತೆ ಅವನ ಮುಖದ ಮೇಲಿತ್ತು. ನನ್ನ ಎದುರಿಗೇ ಕುಳಿತಿದ್ದ ಬಸ್ಸಿನಲ್ಲಿ, ಜಲಹಳ್ಳಿಯಿಂದ ಮೆಜೆಸ್ಟಿಕ್‌ಗೆ ಬರುವ ಬಸ್ಸಿನಲ್ಲಿ.

ಅನಿರೀಕ್ಷಿತ, ಅಸಾಮಾನ್ಯ, ಅಸಾಧಾರಣ ಆಗುವಿಕೆಗಳೂ ಕಲಿಯುಗದಲ್ಲಿ ಆಗಬಹುದು ಒಂದೊಂದುವೇಳೆ. ರಾಷ್ಟ್ರೀಯ ಪುನರ್ವಿಂಗಡಣೆಯ ಸಮಿತಿಗಳಲ್ಲಿ ಸೌಹಾರ್ದ್ರ; ಗಾಂಧೀಭಕ್ತರು ಅಹಿಂಸಾತ್ಮಕರಾಗುವುದು; ಪರೀಕ್ಷಕರು ಹೋಂ ಟ್ಯೂಷನ್ ಇಟ್ಟುಕೊಂಡಿದ್ದರೂ ಪ್ರಶ್ನೆಗಳನ್ನು ಹೇಳಿಕೊಡದೇ ಇರುವುದು; ಕಾಲಕ್ಕೆ ಸರಿಯಾಗಿ ಸಚಿವರು ಬಂದೇ ಬಿಡುವುದು, ಇತ್ಯಾದಿ ಇತ್ಯಾದಿ. ಹಾಗಾದರೂ ಕೂಡ ಜಲಹಳ್ಳಿ ಬಸ್ಸಿನಲ್ಲಿ ಇಬ್ಬರೇ ಪ್ರಯಾಣಿಕರು ಬರುವುದು ಒಲು ಸೋಜಿಗ. ಆ ಸಂಜೆ ನಾನು ಬಸ್ ಹತ್ತಿದಾಗ ಈ ಸೋಜಿಗ ನಡೆದೇಹೋಯಿತು.

ಎರಡು ನಿಮಿಷ ನನ್ನನ್ನೇ ನೋಡಿದ. ಮೂರುನಿಮಿಷ ನೋಡಿದ. ಐದು ನಿಮಿಷ ನೋಡಿದ. ಹಠಾತ್ತಾಗಿ ಕೇಳಿದ. “ಅದು ಯಶವಂತಪುರ ಅಲ್ಲವೇ” ಅಂತ.

ಹಸನ್ಮುಖನಾಗಿ ಹೌದಯ್ಯಾ ಅಂತ ಹೇಳಿದೆ.

“ನೂರಾರು ಸಾರಿ ಈ ರಸ್ತೆಯಲ್ಲಿ ಹೋಗಿದ್ದೇನೆ ಆದರೆ ಅಲ್ಲಿಗೆ ಇಳಿದು ಹೋಗಲೇ ಇಲ್ಲ ನಾನು ಇಲ್ಲಿನ ತನಕ” ಎಂದು ಹೇಳಿದ ಆಗಂತುಕ.

“ಹೌದಾ” ಅಂದೆ ಮಂಗಳೂರು ಅಡಿಕೆ ಪೊಟ್ಟಣವನ್ನು ಬಿಚ್ಚುತ್ತಾ.

“ಯಶವಂತಪುರವನ್ನ ನೋಡಬೇಕು, ಆದರೂ ಈ ಜನ್ಮದಲ್ಲಿ ನೋಡುಕ್ಕೆ ಆಗುತ್ತೋ ಇಲ್ಲವೋ? ವಾರಕ್ಕೆ ಮೂರುಬಾರಿ ಮೆಜೆಸ್ಟಿಕ್‌ಗೆ ಹೋಗುತ್ತೇನೆ,

ನಿಖರವಾಗಿ ೭.೮ ಮೈಲಿ ಆಗುತ್ತೆ. ಆದರೂ ೨.೩ ಮೈಲಿ ಇರುವ ಯಶವಂತಪುರಕ್ಕೆ ಹೋಗುವುದು ನನ್ನ ಹಣೆಯಲ್ಲೇ ಬರೆದಿಲ್ಲವೇನೋ? ಎಂದು ಹೇಳಿದ.

ದಿನಪತ್ರಿಕೆಗಳಲ್ಲಿ ಸಭೆ ಸಮಿತಿಗಳ ವರದಿಯನ್ನು ಓದಿಯೇ ತಲೆ ಕೆಟ್ಟುಹೋಗುವುದು ಸ್ವಾಭಾವಿಕ. ಮನೆಯಲ್ಲಿ ಮಡದಿ ಮಕ್ಕಳು ತರಲೆ ಹಚ್ಚಿದರೆ, ಹುಚ್ಚು ಹಿಡಿಯುವುದೂ ಸಹಜ. ಆದರೆ ಬಸ್ಸಿನಲ್ಲಿ ಪ್ರಯಾಣಮಾಡುವಾಗ ಈ ರೀತಿ ಮಾತನಾಡುವವ ಜತೆಗಾರನಾದರೆ ಬುದ್ಧಿ ಹತೋಟಿಯಲ್ಲಿರುವುದು ದುಸ್ಸಾಧ್ಯ ಎನ್ನಿಸಿತು. ಎಲ ಎಲಾ! ನಾನಾದರೂ ಏಕೆ ರಾಹುಕಾಲದಲ್ಲಿ ಬಸ್ ಹತ್ತಿದೆ ಎಂದು ದುಃಖಿಸಿದೆ. ಆದರೂ ಕೆರಳಿದವರನ್ನು ಒಳ್ಳೆಮಾತಾಡಿ ನಮ್ಮ ಸುರಕ್ಷತೆಯನ್ನು ಕಾಪಾಡಿಕೊಳ್ಳಬಹುದು ಎಂದು ಚೀಣೀಜ್ಞಾನಿಗಳು ಎಲ್ಲಿಯೋ ಹೇಳಿರಲೇಬೇಕಲ್ಲವೇ? ತಥಾರೀತಿ ಸಹಾನುಭೂತಿ ತೋರಿಸಲೋಸುಗ—

"ಅಯ್ಯೋ! ಪಾಪ! ತ್ಸು ತ್ಸು ತ್ಸು" ಅಂತ ಹಲ್ಲಿಯಂತೆ ಲೊಚಗುಟ್ಟಿದೆ.

"ಪಾಪ ಏನು ಬಂತು, ಅದು ನನ್ನ ಕರ್ಮ" ಎಂದ ಆಗಂತುಕ.

"ಖರ್ಮ! ಏನು ಬಂತು, ಬೇಕಾದರೆ ಇಲ್ಲೇ ಇಳಿದು ಯಶವಂತಪುರಕ್ಕೆ ಹೋಗಲೇಬಹುದಲ್ಲಾ" ಅಂದೆ, ಸ್ವಲ್ಪ ತಾಳ್ಮೆ ಮೀರಿದ ಕಾರಣ.

"ಅಸಾಧ್ಯ" ಅಂದ ಆಗಂತುಕ. "ಜಾತಕದಲ್ಲೇ ಇಲ್ಲ" ಅಂದ ಆಗಂತುಕ. "ನೋಡಿ ೧೪೩೭ ಸಾರಿ ಈ ದಾರಿಯಲ್ಲಿ ಹೋಗಿರುವವರು, ೧ ಸಾರಿಯಾದರೂ ಯಶವಂತಪುರದಲ್ಲಿ ಇಳಿದಿಲ್ಲ. ೩೪೪೮ ಬಾರಿ ಪ್ರಯಾಣಮಾಡಿದವರು ೧ ಸಾರಿ ಇಳಿದಿದ್ದಾರೆ. ನಾನು ೫೬೭೮ ಬಾರಿ ಪ್ರಯಾಣಮಾಡಿದ್ದೇನೆ. ಅಂದರೆ ೦ ೦.೩ ಸಾರ್ತಿ ನಾನು ಯಶವಂತಪುರದಲ್ಲಿ ಇಳಿಯಬಹುದು" ಎಂದ ಕಿವಿ ಕೆರೆಯುವುದನ್ನು ಅರೆಕ್ಷಣ ನಿಲ್ಲಿಸಿ.

ಇಂತಹ ಪ್ರಸಂಗದಲ್ಲಿ ಅಂತಹವರನ್ನು ಅವರ ಅಹಂಕಾರ ಹೆಚ್ಚುವ ರೀತಿ ವರ್ತಿಸಿದರೆ ನಮಗೆ ಕ್ಷೇಮ ಎಂದು ಎಲ್ಲೋ ಚೌಂಗ್ಸ್ಟ್ರಿ ಹೇಳಿರಬೇಕು ಎಂದು ಲಿನ್ ಯೂ ಟಾಂಗ್ ಹೇಳಿರಬೇಕಲ್ಲವೆ.

"ತಾವು ಯಾರು ಸ್ವಾಮಿ! ಮಹಾಸ್ವಾಮಿ!!" ಎಂದೆ.

"ಆ್ಞ" ಎಂದ ಆಗಂತುಕ ಹಿಗ್ಗಿದ ಹಿರೇಕಾಯಿನಂತೆ ಮುಖಮಾಡಿಕೊಂಡು.

"ಅದೇ! ತಾವು ಯಾರು? ಎಂದೆ ತಾವು ಜಗದ್ಗುರುಗಳೇ? ರಾಷ್ಟ್ರದ ಏಕಮೇವ ನಾಯಕರೇ? ಶ್ರೀರಾಮಚಂದ್ರನೇ? ಅಥವಾ ಮಹಾತ್ಮಾ ಶಿಶುಪಾಲನೇ?" ಎಂದು ಕೇಳಿದೆ.

“ಅವರೆಲ್ಲಾ ಅಲ್ಲಾರ! ತ್ಸ ತ್ಸ” ಎಂದು ಈ ಸರ್ತಿ ಅವ ಲೊಚಗುಟ್ಟಿದ, ಬಲಿತ ಹಲ್ಲಿಯು ತೆರದಿ.

“ತಪ್ಪಾಯ್ತು ಮಹಾಪ್ರಭೋ! ಅಂದಮೇಲೆ ತಾವು ದೇವರೇ.. ....”

“ಅದೇನು ಮಹಾ ಅಂತ, ಎಲ್ಲ ನಿಯಮಗಳಿಗೂ ಆಧಾರಭೂತನಾದ, ಅದೆಲ್ಲ ಚಲನವಲನಗಳಿಗೂ ಮೂಲಾಧಾರ ನಿಯಮದಂತಿರುವ ನನ್ನ ಕಸುಬು ಎಲ್ಲವನ್ನೂ ಅತಿಗ್ರಮಿಸಿರುವುದು. ಎಲ್ಲ ರೀತಿಗಳ ಎಲ್ಲೆಯೇರುತ ನಿಂತ ನನ್ನ... ... .ಯಾರು ಎಂದು ಕೇಳ್ತೀರಲ್ಲಾ” ಎಂದ.

“ಅಂದರೆ ತಾವು ??????” ಎಂದೆ.

“ನಾನೇ ಲೆಕ್ಕಾಚಾರದ ಆಚಾರ್ಯ. ಅಂಕಿ ಅಂಶಗಳ ಅಧಿಪತಿ” ಎಂದ, ಕೊಬ್ಬಿದ ಹೇಂಟೆಯ ಮುಂದೆ ಕೊಬ್ಬಿದ ಕೆಚ್ಚಿದ ಹುಂಜ ಹೇಳುವಂತೆ. ನಾನು ನಮ್ರತೆಯಿಂದ ತಲೆಬಾಗಿಸಿದೆ.

ಆಗಂತುಕ ಮುಂದುವರೆಸಿದ, ನನ್ನ ನಿಸ್ಸಹಾಯತೆಯನ್ನು ಕಂಡು, ಆ ಓಡುವ ಬಸ್ಸಿನಿಂದ ಹಾರಿಬೀಳುವ ಸಾಮರ್ಥ್ಯ ನನಗಿಲ್ಲವೆಂದು ಕಂಡುಕೊಂಡು—

“ನೋಡಯ್ಯಾ! ಜಲಹಳ್ಳಿಯಿಂದ ಬಳೇಪೇಟೆಗೆ ೭.೮ ಮೈಲಿ. ಬಳೇಪೇಟೆಯಿಂದ ವಂಕಿಪೇಟೆಗೆ ೧.೨ ಮೈಲಿ. ವಂಕಿಪೇಟೆಯಿಂದ ಕೊಂಕಿನಪೇಟೆಗೆ ಅರ್ಧ ಮೈಲಿ. ಕೊಂಕಿನಪೇಟೆಯಿಂದ ಬಿಂಕದಪೇಟೆಗೆ ಕಾಲೇಮೈಲಿ. ಬಿಂಕದ ಪೇಟೆಯಿಂದ ಸುಂಕದಪೇಟೆಗೆ ಚಟಾಕುಮೈಲಿ.

ಅಲ್ಲದೆ—

ಜಲಹಳ್ಳಿಯಿಂದ ಬಳೇಪೇಟೆಗೆ ೩೩೩.೩ ಜನರು ಮಾಸಂಪ್ರತಿ ಪ್ರಯಾಣ ಮಾಡುತ್ತಾರೆ. ಬಳೇಪೇಟೆಯಿಂದ ವಂಕಿಪೇಟೆಗೆ ೨೨೨.೨ ಜನರು ಮಾಸಂಪ್ರತಿ ಪ್ರಯಾಣಮಾಡುತ್ತಾರೆ. ವಂಕಿಪೇಟೆಯಿಂದ ಕೊಂಕಿನಪೇಟೆಗೆ ೧೧೧.೧ ಜನರು ಮಾಸಂಪ್ರತಿ ಪ್ರಯಾಣಮಾಡುತ್ತಾರೆ. ಕೊಂಕಿನಪೇಟೆಯಿಂದ ಬಿಂಕದಪೇಟೆಗೆ ೫೫.೫ ಜನರು ಪ್ರಯಾಣಮಾಡುತ್ತಾರೆ. ಬಿಂಕದಪೇಟೆಯಿಂದ ಸುಂಕದಪೇಟೆಗೆ ೨.೨೫ ಜನರೇ ಪ್ರಯಾಣಮಾಡುತ್ತಾರೆ. ಅಷ್ಟೇ ಅಲ್ಲಾ! ಮಿತ್ರಾ!! ಇನ್ನೂ ಕೇಳು.

ಜಲಹಳ್ಳಿಯಿಂದ ಬಳೇಪೇಟೆಗೆ ೧೫೨.೪ ಹೆಂಗಸರು ಮಾಸಂಪ್ರತಿ ಪ್ರಯಾಣ ಮಾಡುತ್ತಾರೆ. ಬಳೇಪೇಟೆಯಿಂದ ವಂಕಿಪೇಟೆಗೆ ೭೨೬೩ ಹೆಂಗಸರು ಪ್ರಯಾಣ ಬೆಳೆಸುತ್ತಾರೆ. ವಂಕಿಪೇಟೆಯಿಂದ ಕೊಂಕಿನಪೇಟೆಗೆ ೨.೩೪೧ ಹೆಂಗಸರು ಪ್ರಯಾಣ ಹೂಡುತ್ತಾರೆ. ಕೊಂಕಿನಪೇಟೆಯಿಂದ ಸುಂಕದಪೇಟೆಗೆ ೦.೧೨೬೪ ಜನ ಹೆಣ್ಣು ಮಕ್ಕಳು ದಾರಿಸಾಗುತ್ತಾರೆ; ಮಾಸಂಪ್ರತಿ;”

ಎಂದು ಅಂಕಿ ಅಂಶಗಳನ್ನು ವಿಶದೀಕರಿಸಿದ.

ಆಗಂತುಕನ ಯೋಗ್ಯತೆ, ಕಸುಬು, ಕಾರಣ, ಎಲ್ಲಾ ನನಗೆ ಆಗ ತಿಳಿ ತಿಳಿಯಾಗಿ ತಿಳಿಯುಹತ್ತಿತು.

ಅಷ್ಟರಲ್ಲೇ ಆಗಂತುಕ ತಿರುಗಿ ತೊಡಗಿದ ತನ್ನ ವ್ಯಾಖ್ಯಾನಕ್ಕೆ—

ಜಲಹಳ್ಳಿಯಿಂದ ಬಳೇಪೇಟೆಗೆ ೪.೩ ಆಣೆ ಸರಾಸರಿ ಖರ್ಚು. ಬಳೇಪೇಟೆಯಿಂದ ವಂಕಿಪೇಟೆಗೆ ೪.೩ ರೂಪಾಯಿ ಸರಾಸರಿ ಖರ್ಚು. ವಂಕಿಪೇಟೆಯಿಂದ ಕೊಂಕಿನಪೇಟೆಗೆ ೦.೪೨ ಆಣೆ ಸರಾಸರಿ ಖರ್ಚು. ಕೊಂಕಿನಪೇಟೆಯಿಂದ ಬಿಂಕದಪೇಟೆಗೆ ೩ ೨೮ ರೂಪಾಯಿ ಸರಾಸರಿ ಖರ್ಚು. ಬಿಂಕದಪೇಟೆಯಿಂದ ಸುಂಕದಪೇಟೆಗೆ—ಮಿಕ್ಕಿದ್ದೆಲ್ಲಾ ಖರ್ಚು ಎಂದು ಹೇಳಿದ.

ನನಗೆ ಅನುಮಾನ ಸ್ವಲ್ಪವೂ ಉಳಿಯಲಿಲ್ಲ. ಆಗಂತುಕ ಸಹಪ್ರಯಾಣಿಕನ ಯೋಗ್ಯತೆ ಪೂರ್ಣ ಅರ್ಥವಾಗಿತ್ತು. ಆ ಕಾರಣದಿಂದಲೇ ಬಾಯಿಬಿಡುವ ಧೈರ್ಯವೂ ಇದ್ದಿಲ್ಲ. ಮೇಲೇರಿಬಂದ ಆಕಳಿಕೆಯನ್ನು ಮೂಗೆತ್ತಿ ಸಿಲ್ಲಿಸಿಕೊಂಡು ಅವನನ್ನೇ ಎವೆಯಿಕ್ಕದೆ ನೋಡಹತ್ತಿದೆ.

ಅವ ನನ್ನನ್ನು ಕಂಡೂಕಾಣದ ದೃಷ್ಟಿಯಿಂದ ಮುಂದುವರೆಸಿದ.

ನನ್ನ "ನನ್ನ ಮಾಸಿಕ ವರಮಾನ ೧೫೨.೪ ರೂಪಾಯಿ. ನನ್ನ ಮನೆ ಬಾಡಿಗೆ ಇತ್ಯಾದಿ ೫೨.೪ ರೂಪಾಯಿ ಊಟ ಉಪಚಾರ ೨.೪ ರೂಪಾಯಿ. ಭಾವ ಮೈದುನರ ಊಟಉಪಚಾರ ೧೨.೮ ರೂಪಾಯಿ. ಸೌದೆ ಖರ್ಚು ೨೬ ೭ ರೂಪಾಯಿ. ನನಗೆ ೧ ಹೆಂಡತಿ ೨.೪ ಮಕ್ಕಳು" ಎಂದು.

"ಅದೃಷ್ಟಶಾಲಿಯಯ್ಯಾ! ನೀನು! ನಿನ್ನನ್ನು ದೇಶಮುಖರು ಹಿಡಿಯುವಂತೇ ಇಲ್ಲ ಆತನಿಗ ಚೆನ್ನಾಗಿ ಚೆಳ್ಳೆಹಣ್ಣು ತಿನ್ನಿಸಿದ" ಎಂದೆ.

"ಹ್ಞಾ; ಹ್ಞಾ" ಎಂದ ಗದರಿಸುವ ಧ್ವನಿಯಲ್ಲಿ.

ಹೆದರಿ, ನಾನು ವಿಶದೀಕರಿಸಿದೆ.

"ಆ ವರಮಾನದಿಂದಾಗಿ ನೀನು, ತಪ್ಪಾಯ್ತು, ತಾವು ವರಮಾನ ತೆರಿಗೆಯವರ ಸಂಕೋಲೆಗಳಿಂದ, ಅವರ ಗೋತ್ರೋದ್ಭವನಾದ ದೇಶಮುಖನ ಕಾರ್ಪಣ್ಯದಿಂದ ಹೊರನಾಗಿರುವುದಕ್ಕಾಗಿ ಅಭಿನಂದನೆಗಳು ಎಂದು ಹೇಳಬಯಸಿದ್ದೆ ಅಷ್ಟೇ!" ಎಂದು.

"ಅದೇನು ಮಹಾ! ಅ, ಅಂದರೆ ಅಕಬರನಿಂದ; ಡ, ಎಂದರೆ ಡಾಲ್ಮಿಯಾ ಮೂಲಕ; ಜ, ಎಂದರೆ ಜೈನನ ಮುಖಾಂತರ; ಟ, ಎಂದರೆ ಟಾಟಾ ದ್ವಾರಾ; ಯ, ಎಂದರೆ ಯವನ ಮೋಹಿತ ರಾಜರ ನೌಕರರ ಮೂಲಕ; ವ, ಎಂದರೆ ವಾಣಿಜ್ಯ ರೀತ್ಯಾ; ಕ್ಷ, ಎಂದರೆ ಕ್ಷೇತ್ರಪಾಲಕನವರಿಗೂ ಎಲ್ಲರೂ ದೇಶಮುಖನನ್ನು ಪರದೇಶಿ

ಮುಖನನ್ನಾಗಿ ಮಾಡಿದ್ದಾರಯ್ಯಾ! ಅದರಲ್ಲಿ ಮಹಾತ್ಮೆ ಏನು ಬಂತು! ಚಾತುರ್ಯ ಏನು ಬಂತು" ಎಂದ.

"ಹಾಗಾ" ಅನ್ನುವ ಮನೋಭಾವ ನನ್ನ ಮುಖವನ್ನೇರಿತು. ಅದನ್ನು ಕಂಡ ಆಗಂತುಕ ಮುಂದುವರೆದ; ತನ್ನ ಕಿಸೆಯೊಳಗಿನ ಸಣ್ಣ ಪುಸ್ತಕವನ್ನೂ, ಪೆನ್ಸಿಲನ್ನೂ ಹೊರಕ್ಕೆ ತೆಗೆದು; ಬರೆಯುತ್ತಾ, ಮಾತನಾಡುತ್ತಾ, "ನೋಡಯ್ಯಾ, ಈ ಬಸ್ಸಿನಲ್ಲಿ, ದಿನಂಪ್ರತಿ ೩೪.೮ ಜನರು ಜಲಹಳ್ಳಿಯಿಂದ ಸುಂಕದ ಪೇಟೆಗೆ ಪ್ರಯಾಣಮಾಡುತ್ತಾರೆ. ಅವರಲ್ಲಿ ಸುಂಕದ ಪೇಟೆಯಲ್ಲಿ ಇಳಿದು ಮನೆಗೆ ಸೇರಬೇಕಾದವರು ೩೨೬ ಜನರು; ಅಂದರೆ ೨೧೨ ಜನರು. ಆದರೆ ೧.೦೬ ಜನರು ಮನೆ ಸೇರುತ್ತಾರೆ ಕಾರಣ ಗೊತ್ತೇ? ೧ ಜನ ಬಸ್ಸಿನಿಂದಿಳಿದು ರಸ್ತೆ ನಡೆಯುವಾಗ ಆಟೋರಿಕ್ಷಾ ಅಪಘಾತಕಕ್ಕೆ ಈಡಾಗಿ, ಎನ್ನುತ್ತಿದ್ದಾಗಲೇ ಮೆಜೆಸ್ಟಿಕ್ ನಿಲ್ದಾಣ ಸಿಕ್ಕಿತು.

ಇಬ್ಬರೂ ಇಳಿದೆವು.

ಆಗಂತುಕ ಬಲುವೇಗದಿಂದ ಹೊರಬಿದ್ದ.

ಎದುರಿಗೆ ಆಟಾಟೋಪದಿಂದ ಬರುತ್ತಿದ್ದ ಆಟೋರಿಕ್ಷಾ ನಂಬರು ೩೬ ಕಾಣಿಸಲಿಲ್ಲ, ಅದರ ಕೆಳಕ್ಕೆ ಸಿಕ್ಕಿಹಾಕಿಕೊಂಡ. ಉತ್ತರ, ಆಟೋರಿಕ್ಷಾ ಚೂರು ಚೂರಾಯ್ತು. ಆಗಂತುಕ ಎದ್ದು ನಿಂತ ಮೈ ಕೊಡವಿಕೊಂಡ. ಸುಂಕದಪೇಟೆಗೆ ಹೊರಟೇಬಿಟ್ಟ ಆ ೧ ಇನನಾಗಲಿಲ್ಲ

* * *

ಮೂರು ತಿಂಗಳಾಯ್ತು. ಕಾರಣಾಂತರ ದೆಹಲಿಗೆ ನಾನು ಹೋಗಬೇಕಾಯ್ತು. ಚಂದನೀ ಚೌಕದ ಬಳಿ ದಾರಿ ಹಾಯಲು ನಿಂತಾಗ ನನ್ನೆದುರಿಗೆ ಒಂದು ಘಡಾ ಉದ್ದೀನನ ತೆಂನ ಮೋಟಾರು ಕಾರು ನಿಂತಿತು. ಆದರೊಳಗೆ ಯಾರಿದ್ದರು ಅಂತೀರಿ? ಆಗಂತುಕ!!

"ಬಾರಯ್ಯಾ! ಎಲ್ಲಿಗೆ ಬೇಕಾದರೂ ಕರೆದೊಯ್ಯುತ್ತೇನೆ" ಎಂದ ಅದರೊಳಗೆ ಕುಳಿತಿದ್ದ ಭಡ ಸಾಹುಕಾರನಂತಿದ್ದ ಆಗಂತುಕ.

ಸುಸ್ತಾಗಿದ್ದ ನಾನು ಆ ಕಾರಿನಲ್ಲಿ ಕುಳಿತೆ. ಆಗಂತುಕನ ಯೋಗಕ್ಷೇಮವನ್ನು ವಿಚಾರಿಸಿದೆ. ಆತ, ಯಶವಂತಪುರ ಅಂಕಿ ಅಂಶ ಎಲ್ಲವನ್ನೂ ಜ್ಞಾಪಿಸಿದ. ತನ್ನ ಭೋಗ ಕ್ಷೇಮವನ್ನೆಲ್ಲಾ ಹೇಳಿದ. ನನ್ನನ್ನು ನನ್ನ ಒಡ ತಂಗಿಯ ಮನೆಯ ಹತ್ತಿರ ಇಳಿಸಿ ಧನ್ಯವಾದ ಹೇಳಿ ಹೊರಟುಹೋದ.

ಆಗಂತುಕನೇ ನಮ್ಮ ಭಾರತದ ದ್ವಿತೀಯ ಪಾಂಚವಾರ್ಷಿಕ ಯೋಜನೆಯನ್ನು ಮರೆಯಲ್ಲಿ ತಯಾರಿಸಿ, ಅಧಿಕಾರಿಗಳ ಕಿವಿಯನ್ನು ಹಿಂಡುತ್ತಿರುವವನು; ಎಂದು ಹೇಳಬೇಕೇ??

—ಯೋ. ರಾಮಸ್ವಾಮಿ.

ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತ ವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪು ನೆಪ್ಪುಗಳು ಕಡಿಮೆಯಾಗುವುವು. ಒಪ್ಪಿದ ಲೇಖನಗಳಿಗೆ ಪ್ರತ್ಯುತ್ತರ ಉಂಟು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩—೦—೦
ಬಿಡಿ ಪ್ರತಿ ಕೇವಲ ಆಣೆ ೦—೪—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.

Koravanji, March 1956

REG No M 4718 KORAVANJI, MARCH 1956



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

★ ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ. ★

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು 3.

Printed by B. S. Iyengar, Bangalore City.
Publisher—B. N. Gupta. Editor—M Sivaram.